ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 28 ಜುಲೈ 10, 1983 ಬೆಲೆ 60 ಪೈಸೆ

ನೆರೆ ಹಾವಳಿ - ಪರಿಹಾರ

ಬೇಸಿಗೆಯಲ್ಲಿ ಬರಗಾಲ, ಮಳೆಗಾಲದಲ್ಲಿ ನೆರೆ ಹಾವಳಿ. ನಮ್ಮ ರಾಜ್ಯದಲ್ಲಿ ಕಾಣುತ್ತಿರುವ ಪ್ರಕೃತಿಯ ನಿಯಮವಿದು.

ರಾಜ್ಯದಲ್ಲಿಯ ಹದಿನಾರು ಜಿಲ್ಲೆಗಳಲ್ಲಿ ಉಂಟಾದ ಬರಗಾಲದ ಬವಣೆಯಿಂದ ಪಾರಾಗಲು ಪ್ರಯತ್ನ ನಡೆಯುತ್ತಿದ್ದಂತೆಯೇ ರಾಜ್ಯದ ಕರಾವಳಿ – ಮಲೆನಾಡು ಜಿಲ್ಲೆಯ ಜನ ನೆರೆ ಹಾವಳಿಗೆ ಬಲಿಯಾಗಿ ಪ್ರಾಣ, ಸೊತ್ತು ಕಳೆದುಕೊಳ್ಳುವ ದಾರುಣ ದೃಶ್ಯ ನೋಡುತ್ತಿದ್ದೇವೆ. ಸ್ವಾತಂತ್ರ್ಯ ಪಡೆದ ಮೂರುವರೆ ದಶಕಗಳ ನಂತರವೂ ಇಡೀ ರಾಜ್ಯವೇ ಬರಗಾಲ–ನೆರೆ ಹಾವಳಿಯಂಥ ಸಮಸ್ಯೆಗಳನ್ನೆದುರಿಸಬೇಕಾಗಿ ಬಂದಿದೆಂಬುದನ್ನು ನೋಡುವಾಗ ರಾಜಕೀಯ ಆಡಳಿತೆಯ ನಿಜ ಸ್ವರೂಪ ಕಂಡುಬರುತ್ತಿದೆ.

ಪ್ರಕೃತಿಯನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಮಾನವ ಜನಾಂಗದ ಅಭಿವೃದ್ಧಿಗೆ ಅತ್ಯಗತ್ಯ. ಮಾನವ ತನ್ನ ಬುದ್ಧಿ ಬಲದಿಂದ ಈ ಕಾರ್ಯದಲ್ಲಿ ಬಹುಮಟ್ಟಿಗೆ ಜಯಗಳಿಸಿದ್ದಾನೆ. ಬಂಡವಾಳಶಾಹಿ ಸರಕಾರಗಳು ಅದನ್ನು ಕೆಲವೇ ಜನರ ಲಾಭಕ್ಕಾಗಿ ಉಪಯೋಗಿಸುತ್ತಿರುವಾಗ ಸಮತಾವಾದಿ ದೇಶಗಳಲ್ಲಿ ಅದನ್ನು ಮಾನವ ಕೋಟಿಯ ಒಳಿತಿಗಾಗಿ ಉಪಯೋಗಿಸುತ್ತಿರುವುದನ್ನು ನೋಡುತ್ತಿದ್ದೇವೆ.

ವೈಜ್ಞಾನಿಕ ದೃಷ್ಟಿಯಿಂದ ಭಾರತ ದೇಶವೇನೂ ಹಿಂದುಳಿದಿರುವುದಿಲ್ಲ. ಪ್ರಖ್ಯಾತ ವಿಜ್ಞಾನಿಗಳನ್ನು ನಾವು ಪಡೆದಿದ್ದೇವೆ. ಆದರೆ ಅವರ ಸೇವೆಯನ್ನು ಬಂಡವಾಳಶಾಹಿಗಳಿಗೆ ಎರವಲು ಕೊಟ್ಟಿದ್ದೇವೆ. ದೇಶ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ, ಅಭಿವೃದ್ಧಿ ಕಾರ್ಯಗಳಿಗೆ ಅವರನ್ನು ಉಪಯೋಗ ಮಾಡಿಕೊಳ್ಳುವುದರಲ್ಲಿ ವಿಫಲರಾಗಿದ್ದೇವೆ. ಆ ಕಾರಣದಿಂದಲೇ ಬರಗಾಲ–ನೆರೆ ಹಾವಳಿಗಳ ಪರಿಹಾರಕ್ಕೆ ನಿರ್ಣಯಕ ನಿರ್ಣಯ ಕೈಗೊಳ್ಳುವಲ್ಲಿ ಸರಕಾರ ವಿಫಲವಾಗಿದೆ.

ನೆರೆ ಹಾವಳಿಯಿಂದ ಉಂಟಾಗುವ ಹಾನಿಯನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲವೇ ? ಸಮತಾವಾದಿ ದೇಶಗಳೂ ಹಾಗೆಯೇ ಇತರ ಕೆಲವರೂ ಇದಕ್ಕೆ ಪರಿಹಾರ ಕಂಡು ಹಿಡಿದಿದ್ದಾರೆ.

ಕ್ಯಾಲಿಫೋರ್ನಿಯಾ ಭಾಗದಲ್ಲಿ ಸಂಭವನೀಯ ನೆರೆಹಾವಳಿಯ ಕುರಿತು ಜನರಿಗೆ ಮುನ್ನೆಚ್ಚರಿಕೆ ನೀಡುವ ವ್ಯವಸ್ಥೆಯೊಂದಿದೆ. ಇದರಿಂದ ಬೀಳುವ ಮಳೆಯ ಪ್ರಮಾಣ, ಹಳ್ಳಕೊಳ್ಳಗಳಲ್ಲಿ ಹರಿಯುವ ನೀರಿನ ಪ್ರಮಾಣ ತಿಳಿದುಕೊಳ್ಳಬಹುದಾಗಿದೆ. ಮೂರು ನಾಲ್ಕು ತಾಸು ಮುಂಚಿತವಾಗಿಯೇ ಎಚ್ಚರಿಕೆ ನೀಡಲಾಗುವುದರಿಂದ, ಗಂಡಾಂತರಕ್ಕೊಳಗಾಗಬಹುದಾದ ಪ್ರದೇಶದ ಜನರಿಗೆ ಸಂರಕ್ಷಣೆ ನೀಡಲು ಅನುಕೂಲವಾಗುವುದು. ರಾಷ್ಟ್ರೀಯ ಹವಾಮಾನ ಸೇವಾಸಂಸ್ಥೆ ಎಂಬುದು ಇಂಥ ಮಾಹಿತಿಯ ವ್ಯವಸ್ಥೆ ಮಾಡುತ್ತಿದೆ. ನಮ್ಮ ದೇಶದ ಕೇಂದ್ರ ಸರಕಾರವೂ ರಾಜ್ಯಗಳಿಗೆ ಈ ಸೇವಾ ಸಂಸ್ಥೆಯ ಉಪಯೋಗ ಒದಗುವಂತೆ ಮಾಡುವುದು ಅತ್ಯಗತ್ಯ.

ಹವಾಮಾನ ವರದಿಗಳನ್ನು ಸಲ್ಲಿಸುವ ವ್ಯವಸ್ಥೆ ನಮ್ಮ ದೇಶದಲ್ಲಿಯೂ ಇದೆ ನಿಜ. ಆದರೆ ಅದರ ಭವಿಷ್ಯ ನುಡಿ ಎಂದೂ ನಿಜವಾಗುವುದಿಲ್ಲ. ಪುಣೆಯಲ್ಲಿಯ ಅಂಥ ಒಂದು ಸರಕಾರಿ ಸಂಸ್ಥೆ ತಡವಾಗಿ ಮಾನ್ಸೂನ್ (ಮಳೆ) ಪ್ರಾರಂಭವಾಗುತ್ತದೆಂದು ಸಾರುತ್ತಿದ್ದಂತೆಯೇ ಮಂಗಳೂರು – ಬೆಳಗಾವಿಗಳಲ್ಲಿ ಅಪಾರ ಮಳೆಯಾಗಿ ಹೇಳತೀರದಷ್ಟು ಹಾನಿಯನ್ನುಂಟು

(8ನೇ ಪುಟ ನೋಡಿ)

ಕ್ಯಾಪಿಟೇಶನ್ ಶುಲ್ಕ ರದ್ದತಿ- ಅಸಮರ್ಪಕ ನಿರ್ಣಯ

ಬಹಳ ದಿವಸಗಳಿಂದ ನನೆಗುದಿಗೆ ಬಿದ್ದಿರುವ ಕ್ಯಾಪಿಟೇಶನ್ ಶುಲ್ಕ ರದ್ದತಿಯ ಸಮಸ್ಯೆಯ ಕುರಿತು ಕರ್ನಾಟಕ ಜನತಾ ಸರಕಾರ ತನ್ನ ನಿರ್ಣಯವನ್ನು ಪ್ರಕಟಿಸಿದೆ. ಈ ನಿರ್ಣಯವು ಜನತಾ ಪಕ್ಷ ಜನತೆಗಿತ್ತ ಆಶ್ವಾಸನೆಗೆ ವಿರುದ್ಧವಾಗಿದೆ. ಹೆಗಡೆ ಸರಕಾರ ಹೋದ ತಿಂಗಳು 11 ರಂದು ನೇಮಿಸಿದ್ದ ಸಿಂಧ್ಯಾ ಉಪಸಮಿತಿ ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಶುಲ್ಕ ಸಂಪೂರ್ಣ ರದ್ದು ಮಾಡಬೇಕೆಂದು ಶಿಫಾರಸು ಮಾಡಿತ್ತು. ಎಲ್ಲ ವಿಶ್ವವಿದ್ಯಾಲಯಗಳ ತಜ್ಞರ ಅಭಿಪ್ರಾಯ ಪಡೆದು ಈ ನಿರ್ಣಯಕ್ಕೆ ಬರಲಾಗಿತ್ತು. ರಾಜ್ಯ ಮಂತ್ರಿಮಂಡಲ ಸಿಂಧ್ಯಾ ಕಮಿಟಿಯ ನಿರ್ಣಯವನ್ನೊಪ್ಪಿಕೊಳ್ಳದೆ, ಮತ್ತೊಂದು ಕ್ಯಾಬಿನೆಟ್ ಉಪ ಸಮಿತಿ ನೇಮಿಸಿ ಒಂದು ನಿರ್ಣಯಕ್ಕೆ ಬಂದಿದೆ.

ಈ ನಿರ್ಣಯದ ಪ್ರಕಾರ ಶೇ 45ರಷ್ಟು ಸೀಟುಗಳು ಶುಲ್ಕರಹಿತವಾಗಿರುವುದರಿಂದ ಮುಕ್ತವಾಗಿದ್ದರೂ, ಬಡ–ಮಧ್ಯಮ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುವುದರಲ್ಲಿ ಸಂಶಯವಿಲ್ಲ. ಶಿಕ್ಷಣ ಶುಲ್ಕವನ್ನು ರೂ. 3000 ದಿಂದ ರೂ. 5000 ಕ್ಕೆ ಹೆಚ್ಚಿಸಿರುವುದು ತೀರ ಅನ್ಯಾಯ. ವಿದೇಶಿ ವಿದ್ಯಾರ್ಥಿಗಳಿಗೆ ರೂ. 2 ಲಕ್ಷ, ಪರಪ್ರಾಂತದವರಿಗೆ ರೂ. 1.50 ಲಕ್ಷ ಸೀಟು ಶುಲ್ಕ ಹಾಕಿರುವುದರಿಂದಾಗಿ ತಜ್ಞ ಡಾಕ್ಟರರ ಅಭಾವ ಉಂಟಾಗುವುದರಲ್ಲಿ ಸಂಶಯವಿಲ್ಲ. ಸೀಟು ಶುಲ್ಕ ರದ್ದು ಮಾಡಿದ್ದೇವೆಂದು ಹೇಳುವಾಗಲೇ ರೂ. 50 ಸಾವಿರ ಡೊನೇಷನ್ ಕೊಡಬೇಕೆಂದೂ, ಹತ್ತು ವರ್ಷಗಳ ನಂತರ ಬಡ್ಡಿ ಇಲ್ಲದೆ ಅದನ್ನು ವಾಪಸ್ ಕೊಡಲಾಗುವುದೆಂದೂ ನಿರ್ಣಯಿಸಿರುವುದು ಅಪ್ರತ್ಯಕ್ಷ ರೀತಿಯಿಂದ ಸೀಟು ಶುಲ್ಕ ಹೇರಿದಂತೆಯೇ ಆಗಿದೆ.

ಹೆಗಡೆ ಸರಕಾರದ ಈ ನಿರ್ಣಯ ಅಸಮರ್ಪಕವಾಗಿದೆ. ಅದ್ದರಿಂದ ಈ ನಿರ್ಣಯವನ್ನು ತಿದ್ದುಪಡಿ ಮಾಡಿ ವಿದ್ಯಾರ್ಥಿಗಳು ಪಡೆದ ಅಂಕದ ಆಧಾರದಲ್ಲಿ ಪ್ರವೇಶ ಕೊಡಿಸಬೇಕೆಂದೂ, ಶಿಕ್ಷಣ ಶುಲ್ಕವನ್ನು ಮೊದಲಿದ್ದಂತೆಯೇ ಉಳಿಸಬೇಕೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಸರಕಾರವನ್ನು ಒತ್ತಾಯಿಸುತ್ತದೆ.

ಸಂಪಾದಕೀಯ

ಕಾಂಗ್ರೆಸ್ ಹಗರಣ

ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಸೋಲನ್ನನುಭವಿಸಿದ ಕರ್ನಾಟಕದ ಕಾಂಗ್ರೆಸ್ ಪಕ್ಷದಲ್ಲಿದ್ದ ಭಿನ್ನಾಭಿಪ್ರಾಯಗಳು ಇಷ್ಟು ದಿವಸ ಬೂದಿಯಲ್ಲಿ ಮುಚ್ಚಿದ್ದ ಕೆಂಡದಂತಿತ್ತು. ಕೆ. ಎಚ್. ಪಾಟೀಲರನ್ನು ಪ್ರಾಂತ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಿಸಿದ ನಂತರ ಅದು ಉರಿಯುವ ಬೆಂಕಿಯಾಗಿ ಹೊರಬಿದ್ದಿರುವುದನ್ನು ಕಾಣಬಹುದು. ವೀರಪ್ಪ ಮೊಯಿಲಿಯವರನ್ನು ಶಾಸಕಾಂಗ ಪಕ್ಷದ ಮುಖಂಡರನ್ನಾಗಿ ಆರಿಸಿದಂದಿನಿಂದಲೂ ಅವರ ವಿರುದ್ಧ ಮನೋಭಾವ ಬೆಳೆಯುತ್ತ ಬಂದಿತ್ತು. ವಿರೋಧ ಪಕ್ಷದ ಮುಖಂಡತ್ವದಿಂದ ಮೊಯಿಲಿಯವರನ್ನು ಕಿತ್ತೊಗೆಯಬೇಕೆಂದು ಹೇಳುವವರಿಗೆ ಅಧ್ಯಕ್ಷರಾಗಿ ಕೆ. ಎಚ್. ಪಾಟೀಲರನ್ನು ಆಯ್ಕೆ ಮಾಡಿದ ನಂತರ ಹೆಚ್ಚು ಬೆಂಬಲ ಸಿಗುತ್ತಿದೆ.

ಬಿಜೆಪಿ ಮುಖಂಡ ಎ. ಕೆ. ಸುಬ್ಬಯ್ಯನವರಂತೆಯೇ ವೀರಪ್ಪ ಮೊಯಿಲಿಯವರೂ ಜನತಾ ಸರಕಾರದ ವಿರುದ್ಧ ಕಿಡಿಕಾರುತ್ತಿದ್ದಾರೆ. ತಾವು ಆರ್ಥಿಕ ಮಂತ್ರಿಯಾಗಿದ್ದ, ಹಿಂದಿನ ಸರಕಾರದ ಕ್ಯಾಪಿಟೇಶನ್ ಶುಲ್ಕ ರದ್ದತಿ, ಬರಗಾಲ–ನೆರೆಹಾವಳಿ, ನಿರುದ್ಯೋಗ, ಅಭಿವೃದ್ಧಿ ಕೆಲಸಗಳು, ಭ್ರಷ್ಟಾಚಾರ, ಸ್ಟೈಫಂಡರಿಗಳ ಸಮಸ್ಯೆ–ಮುಂತಾದ ಯಾವುದೇ ಸಮಸ್ಯೆಗಳನ್ನು ಸಮರ್ಪಕವಾಗಿ ಬಗೆಹರಿಸುವಲ್ಲಿ ವಿಫಲಗೊಂಡಿರುವುದನ್ನು ಮರೆತ ಮೊಯಿಲಿಯವರು ವಿರೋಧ ಪಕ್ಷದ ಮುಖಂಡರಾಗಿ ತಮ್ಮ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ. ಜನತೆ ಇವರ ಹೇಳಿಕೆಗಳಿಗೆ ಎಷ್ಟು ಬೆಲೆ ಕೊಡುತ್ತಿದ್ದಾರೆಂಬುದನ್ನು ಮಾತ್ರ ಇವರು ತಿಳಿದುಕೊಂಡಂತೆ ಕಂಡು ಬರುವುದಿಲ್ಲ.

ಲಿಂಗಾಯತ ಕೋಮಿನವರನ್ನೂ, ಮನೆ ಬಿಟ್ಟು ಅಗಲಿ ಹೋಗಿರುವ ಹಳೇ ಕಾಂಗ್ರೆಸ್ಸಿನವರನ್ನೂ ಒಟ್ಟುಗೂಡಿಸುವಲ್ಲಿಯೂ, ಹಾಗೆಯೇ ಕಾಲಾಂತರದಲ್ಲಿ ಹೆಗಡೆ ಸರಕಾರವನ್ನು ಉರುಳಿಸುವುದರಲ್ಲಿಯೂ ಕೆ. ಎಚ್. ಪಾಟೀಲರ ಮುಖಂಡತ್ವ ಸಹಾಯಕವಾದೀತೆಂದೂ, ಮುಂಬರುವ ಲೋಕಸಭೆ ಚುನಾವಣೆ ಕಾಲದಲ್ಲಿ ಇದು ತಮ್ಮ ಪಕ್ಷಕ್ಕೆ ಜೀವತುಂಬ ಬಹುದೆಂಬ ಅಂದಾಜಿನಿಂದಲೇ ಇಂದಿರಾ ಗಾಂಧಿಯವರು ಈ ಹಳೇ ಹುಲಿಗೆ ಮತ್ತೆ ಪಟ್ಟ ಕಟ್ಟಿದ್ದಾರೆಂಬ ಸಂಗತಿ ಎಲ್ಲರಿಗೂ ಗೊತ್ತು. ಕೆ.ಪಿ.ಸಿ.ಸಿ. ಪುನರ್ರಚಿಸುವುದರಲ್ಲೂ, ಪತ್ರಿಕಾ ಹೇಳಿಕೆಗಳನ್ನು ನೀಡುವುದರಲ್ಲೂ ಕೆ. ಎಚ್. ಪಾಟೀಲರು ತಮ್ಮ ರಾಜಕೀಯ ಜಾಣತನವನ್ನು ತೋರಿಸುತ್ತಿದ್ದಾರೆ. ನುರಿತ ರಾಜಕಾರಣಿಯೆಂದು ಮುಖ್ಯಮಂತ್ರಿ ಹೆಗಡೆಯವರನ್ನು ಹೊಗಳುತ್ತ, ಜನತಾ ಸರಕಾರವನ್ನುರುಳಿಸುವ ಉದ್ದೇಶ ತಮಗಿಲ್ಲೆಂದು ಹೇಳುತ್ತ "ಬಿಟ್ಟು ಹೋದವರಿಗೆ" ಪ್ರವೇಶ ನೀಡಲಾಗುವುದೆಂಬ ವಿನಂತಿಯನ್ನು ಪ್ರಕಟಿಸಿದ್ದಾರೆ. ಅದೇ ಸಮಯದಲ್ಲಿ ತಮ್ಮ ಬಲ ಸಂವರ್ಧಿಸಿ, ಮೊಯಿಲಿಯವರನ್ನು ವಿರೋಧ ಪಕ್ಷದ ಮುಖಂಡ ಸ್ಥಾನದಿಂದ ಕೆಳಗಿಳಿಸಿ ತಮ್ಮವರನ್ನೇ ಆ ಸ್ಥಾನಕ್ಕೆ ಆರಿಸುವ ಸಂಚಿನಲ್ಲೂ ಇದ್ದಾರೆ. ಕೆ.ಪಿ.ಸಿ.ಸಿಯ ಪುನರ್ರಚನೆಯಲ್ಲೂ ತಮ್ಮ ಬುದ್ಧಿವಂತಿಕೆಯನ್ನು ಪ್ರಯೋಗಿಸಿದ್ದಾರೆ. ಕಾಂಗ್ರೆಸ್ಸಿನೊಳಗಿನ ಹಳೇ ಹುಲಿಗಳಿಗೆಲ್ಲ ಅಧಿಕಾರಸ್ಥಾನಕೊಟ್ಟು ಅವರನ್ನೆಲ್ಲ ಪಂಜರದಲ್ಲಿಟ್ಟು ತಮ್ಮ ಹಿಡಿತ ಬಿಗಿಗೊಳಿಸಿದ್ದಾರೆ. ತಾನು ಧರ್ಮವೀರನಂತೆ ವರ್ತಿಸುತ್ತಾ, ಬಂಗಾರಪ್ಪನವರ ಗುಂಪಿನವರನ್ನೂ ಆಕರ್ಷಿಸುತ್ತಾ, ತಮಗೆ ಬೇಡಾದವರ ವಿರುದ್ಧ ತಮ್ಮವರಿಂದಲೇ ಜಗಳ ಹಚ್ಚಿಸಿ ಅಂಥವರನ್ನು ದೂರವಿಡುವ ಹೊಂಚನ್ನು ಚಾಣಾಕ್ಷತನದಿಂದ ಪ್ರಾರಂಭಿಸಿದ್ದಾರೆ.

ಅರನೇ ತಾರೀಕಿನಂದು ಜರುಗಿದ ಹೊಸ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಆರೋಪ ಪ್ರತ್ಯಾರೋಪಗಳ ಸುರಿಮಳೆಯೇ ಸುರಿಯಿತೆಂಬ ಸುದ್ದಿ ಪ್ರಕಟವಾಗಿದೆ.

ತಮ್ಮ ಭದ್ರವಾದ ಅಧಿಕಾರದ ಗದ್ದುಗೆಯನ್ನು ಕಳೆದು ಕೊಂಡ ಕಾಂಗ್ರೆಸ್ "ಕೆಳಗೆ ಬಿದ್ದರೂ ಮೀಸೆಗೆ ಮಣ್ಣು ಹತ್ತಿಲ್ಲ" ವೆಂಬಂತೆ ವರ್ತಿಸುತ್ತಿದ್ದರೂ ತನ್ನ ಸಂಸ್ಥೆಯೊಳಗಿನ ಭಿನ್ನಾಭಿಪ್ರಾಯದ, ಗುಂಪುಗಾರಿಕೆಯ ಹಗರಣ ಪರಿಹರಿಸಲಾರದಾಗಿದೆ. ಅಧಿಕಾರದಲ್ಲಿರುವುದೇ ತಮ್ಮ ಮುಖ್ಯ ಗುರಿಯನ್ನಾಗಿಟ್ಟುಕೊಂಡಿರುವ ಬಂಡವಾಳಶಾಹಿ ಪಕ್ಷ ಇಂಥ ಹಗರಣಕ್ಕೊಳಗಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ.

ದೊಡ್ಡಬಳ್ಳಾಪುರ:

ಡಿ. ವೈ. ಎಫ್. ಐ. ತಾಲ್ಲೂಕ್ ಅಧಿವೇಶನ

26-6-83ರಂದು ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದ ಮಹಿಳಾ ಸಮಾಜದಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕ್ ಅಧಿವೇಶನ ನಡೆಯಿತು. ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯರಾದ ಕಾಂ॥ ಜಯಶೇಖರ್ ಸ್ವಾಗತಿಸಿದರು. ಕಾಂ। ವೀರೇಗೌಡರು ಅಧ್ಯಕ್ಷತೆ ವಹಿಸಿದ್ದರು. ಅಧಿವೇಶನವನ್ನು ರಾಜ್ಯ ಸಂಚಾಲಕರಾದ ಕಾಂ। ಎಸ್. ಶಿವರಾಂ ಅವರು ಉದ್ಘಾಟಿಸಿದರು. ಡಿ.ವೈ.ಎಫ್.ಐ. ಯನ್ನು ಸ್ಥಾಪಿಸಲು ಹಾಗೂ ಅಸ್ಸಾಂ ವಿಚ್ಛಿದ್ರಕಾರಿ ಚಳುವಳಿಗಾರರ ಆಕ್ರೋಶಕ್ಕೆ ಸಿಕ್ಕಿ ದೇಶದ ಸಮಗ್ರತೆಗಾಗಿ ಪ್ರಾಣಾರ್ಪಣೆ ಮಾಡಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಕಾಂ॥ ಪೂರ್ಣಚಂದ್ರ ತೇಜಸ್ವಿ ಎಸ್‌ಎಫ್‌ಐ, ಕೃಷ್ಣಮೂರ್ತಿ ಸಿ.ಐ.ಟಿ.ಯು., ಕಾಂ॥ ಸಿ. ರಾಮಭದ್ರಯ್ಯ ರೈತ ಸಂಘ, ಶ್ರೀರಾಂಪುರಂ ಡಿ.ವೈ.ಎಫ್.ಐ.ನ ಚೆಲುವರಾಜ್, ಗುರುಸ್ವಾಮಿ, ಬೆಂಗಳೂರು ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯರಾದ ಎಸ್. ಸುಬ್ಬೇಗೌಡ, ಮಹಿಳಾ ಘಟಕದ ಅಧ್ಯಕ್ಷೆ ಕಾ॥ ಸ್ವರ್ಣಾಂಭ, ಮೈಸೂರುರಸ್ತೆಯ ಡಿ.ವೈ.ಎಫ್‌ಐ.ನ ಸಿ. ರಾಜು ಎಚ್.ಎ.ಎಲ್. ಪ್ರದೇಶ ಡಿ.ವೈ.ಎಫ್.ಐ.ನ ಕಾ। ರಾಮನ್ ಹಾಗೂ ರಾಜಶೇಖರ್ ಅಧಿವೇಶನಕ್ಕೆ ಶುಭಾಶಯಕೋರಿದರು.

ಅಧಿವೇಶನದಲ್ಲಿ 80 ಜನ ಯುವಜನರು ಭಾಗವಹಿಸಿದ್ದರು. ಕಾ। ಜಯಶೇಖರ್ ಮುಂದಿರಿಸಿದ ವರದಿಯ ಮೇಲೆ 10ಜನ ಚರ್ಚೆಯಲ್ಲಿ ಭಾಗವಹಿಸಿ ವರದಿಯನ್ನು ಅಂಗೀಕರಿಸಲಾಯಿತು.

ವಿಜಯ ನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಲು, ನಿರುದ್ಯೋಗ ಸಮಸ್ಯೆಯ ಬಗ್ಗೆ, ಅಸ್ಸಾಂನ ಪ್ರತ್ಯೇಕತಾ ಚಳುವಳಿಯ ವಿರೋಧವಾಗಿಯೂ, ಸೈಪೆಂಡರಿಗಳ ಕಾಯಂಗಾಗಿಯೂ, ಸಣ್ಣ ರೈತರ ಸಾಲ ಮನ್ನಾಮಾಡುವಂತೆಯೂ, ದೊಡ್ಡಬಳ್ಳಾಪುರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲೂ, ಉದ್ಯೋಗ ತರಬೇತಿ ಕೇಂದ್ರಗಳನ್ನೂ ಸ್ಥಾಪಿಸಲು, ಕ್ಯಾಪಿಟೇಶನ್, ಡೊನೇಷನ್ ಹಾವಳಿಗಳಿಗೆ ವಿರೋಧವಾಗಿಯೂ ಹಾಗೂ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರುವಂತೆಯೂ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ಮಾಜಿ ಪುರಸಭಾ ಅಧ್ಯಕ್ಷರಾದ ಶ್ರೀಮಾನ್ ಎಂ. ಎಸ್. ಸಂಪತ್ ಅಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ ಕಿಕ್ಕಿರಿದ ಜನ ಸಂದಣಿಯ ಬಹಿರಂಗ ಸಭೆಯಲ್ಲಿ ಶ್ರೀರಾಂಪುರಂ ಡಿ.ವೈ. ಎಫ್. ಐ. ನ ಸಂಗಾತಿಗಳಾದ ಕೃಷ್ಣಮೂರ್ತಿ, ವೆಂಕಟೇಶ್ ಹಾಗೂ ಮೂರ್ತಿ ಅವರ ನೇತೃತ್ವದಲ್ಲಿ ಬಂದಿದ್ದ ಸಾಂಸ್ಕೃತಿಕ ತಂಡದವರಿಂದ ಹಲವು ಕ್ರಾಂತಿ ಗೀತೆಗಳನ್ನು ಹಾಡಲಾಯಿತು. ನಂತರ ಸಭೆಯಲ್ಲಿ 13 ಜನರ ತಾಲ್ಲೂಕ್ ಸಂಘಟನಾ ಸಮಿತಿಯ ಸದಸ್ಯರನ್ನು ಪರಿಚಯಿಸಲಾಯಿತು. ಸಮಿತಿಯಲ್ಲಿ ವೀರೇಗೌಡರು, ಸದಾನಂದಮೂರ್ತಿ, ಚಿಕ್ಕನರಸಿಂಹಯ್ಯ, ಎಂ. ನರಸಯ್ಯ, ಎಸ್. ರಾಮಚಂದ್ರ, ಹನುಮಂತಪ್ಪ, ಚೆಲುವರಾಜ್, ನಾರಾಯಣಪ್ಪ, ನಾಗರಾಜು, ರುದ್ರಾರಾಧ್ಯ, ರೇಣುಕಾ ಆರಾಧ್ಯ, ಸತ್ಯಕುಮಾರ್, ಜಯಶಂಕರ್ ಮತ್ತು ಜಯಶೇಖರ್ ಸಂಚಾಲಕರಾಗಿರುತ್ತಾರೆ.

ಸಭೆಯನ್ನುದ್ದೇಶಿಸಿ ರಾಜ್ಯ ಸಂಚಾಲಕರಾದ ಕಾಂ॥ ಎಸ್. ಶಿವರಾಂ, ಮುಖ್ಯ ಅಥಿತಿಗಳಾಗಿ ಮೈಸೂರಿನಿಂದ ಆಗಮಿಸಿದ್ದ ರಾಜ್ಯ ಸಂಘಟನಾ ಸಮಿತಿಯ ಸದಸ್ಯರಾದ ಕಾಂ। ಮೋಹನ್‌ಕುಮಾರ್ ಮಾತನಾಡಿದರು. ಸ್ವಾಗತ ಸಮಿತಿಯ ಪರವಾಗಿ ಕಾಂ। ಪೂರ್ಣಚಂದ್ರ ತೇಜಸ್ವಿ ಅವರು ವಂದನಾರ್ಪಣೆ ಮಾಡಿದರು.

ನಂತರ ಸಮುದಾಯ ತಂಡದವರಿಂದ 'ಶ್ರಮ' ಎಂಬ ನಾಟಕವನ್ನು ಅಭಿನಯಿಸಲಾಯಿತು.

ಸರ್ಕಾರಿ ಕಾಲೇಜು ಸ್ಥಾಪಿಸಲು ಎಸ್.ಎಫ್.ಐ ಒತ್ತಾಯ

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಸ್ಥಾಪಿಸಬೇಕೆಂದು ಸ್ಥಳೀಯ ವಿದ್ಯಾರ್ಥಿಗಳು, ಪೋಷಕರು ಒತ್ತಾಯಿಸುತ್ತಲೇ ಬಂದಿರುವುದನ್ನು ಸರ್ಕಾರ ಕಡೆಗಣಿಸಿರುವುದರಿಂದ, ವಿದ್ಯಾರ್ಥಿಗಳು ದಿನಾಂಕ 18-6-83 ರಂದು ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ. ಸರ್ಕಾರಿ ಕಾಲೇಜ್ ಸ್ಥಾಪಿಸುವಂತೆ ಸ್ಥಳೀಯ 'ವಿದ್ಯಾರ್ಥಿ ಸಂಘ'ವು ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರತಿಕ್ರಿಯೆ ಬರದೇ ಇರುವುದರಿಂದ ಎಸ್. ಎಫ್. ಐ. ನಿಯೋಗವೊಂದು ಚಳುವಳಿ ನಡೆಯುತ್ತಿರುವ ಸ್ಥಳಕ್ಕೆ ಭೇಟಿ ನೀಡಿದ ನಂತರ ಹೊಸಪೇಟೆಯ ಎಸ್.ಎಫ್.ಐ. ನಗರ ಸಮಿತಿಯು ಸರ್ಕಾರದ ವಿಳಂಬ ನೀತಿಯನ್ನು ಖಂಡಿಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಕೂಡಲೆ ಸ್ಥಾಪನೆಯಾಗಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದೆ. ಈ ಬೇಡಿಕೆಯ ಸಲುವಾಗಿ ಜೂನ್ 24ರಂದು ಕೂಡ್ಲಿಗಿ ಬಂದ್ ಆಚರಿಸಲಾಯಿತು.

ವರ್ಗಾವಣೆ ತಡೆಗೆ ಎಸ್.ಎಫ್.ಐ. ಒತ್ತಾಯ

ಹೊಸಪೇಟೆ ತಾಲ್ಲೂಕಿನ ಕಮಲಾಪುರದಲ್ಲಿರುವ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನಡೆಸಲ್ಪಡುತ್ತಿರುವ ಆಶ್ರಮ ಶಾಲೆಯು [1ರಿಂದ 4ನೇ ತರಗತಿ] ಹರಪನಹಳ್ಳಿಗೆ ವರ್ಗಾವಣೆ ಮಾಡಬೇಕೆಂದು ಆಡಳಿತ ವರ್ಗದಿಂದ ತಿಳಿದು ಬಂದಿದ್ದ "ವಿದ್ಯಾರ್ಥಿಗಳ ಕೊರತೆಯೆಂಬುದಾಗಿ" ಇದನ್ನು ಗಮನಿಸಿದ ಎಸ್.ಎಫ್.ಐ. ನಗರ ಸಮಿತಿಯು ತನಿಖೆ ನಡೆಸಿದಾಗ ಸಮೀಪದ ಹಳ್ಳಿ ಜನತೆಯು ತಮ್ಮ ಮಕ್ಕಳನ್ನು ಆಶ್ರಮ ಶಾಲೆಗೆ ಸೇರಿಸಲು ಸಿದ್ಧರಿರುವುದಾಗಿ ಆದರೆ ಅಲ್ಲಿಯ ಅವ್ಯವಸ್ಥೆ ಹಾಗೂ ಸರ್ಕಾರಿ ಸೌಲಭ್ಯಗಳು ಸರಿಯಾಗಿ ಮಕ್ಕಳಿಗೆ ವಿತರಣೆ ಆಗುವುದಿಲ್ಲವೆಂದು ದೂರಿತ್ತಿದ್ದಾರೆ. ನಿಜವಾದ ಕಾರಣಗಳನ್ನು ತಿಳಿಯಲು ಆಡಳಿತ ವರ್ಗದ ಮೇಲೆ ಜನತೆಯ ಆರೋಪವನ್ನು ಕುರಿತು ಸರಿಯಾದ ತನಿಖೆ ನಡೆಸಿ, ಆಶ್ರಮದ ಶಾಲೆಯು ಕಮಲಾಪುರದಲ್ಲಿಯೇ ಉಳಿಯುವಂತೆ ಮಾಡಿ ದಲಿತವರ್ಗದ ಮಕ್ಕಳ ಮುಂದಿನ ವಿದಾಭ್ಯಾಸಕ್ಕೆ ಅನುಕೂಲ ಮಾಡುವಂತೆ ಎಸ್.ಎಫ್.ಐ. ನಗರ ಸಮಿತಿಯು ಒತ್ತಾಯಿಸುತ್ತದೆ.

ಲೇಖಕ್‌ನೋಟ್ ಬುಕ್‌ಗಳ ಪೂರೈಕೆಗೆ ಎಸ್.ಎಫ್.ಐ. ಒತ್ತಾಯ

ಜೂನ್ ತಿಂಗಳಿನಲ್ಲಿ ಶಾಲಾ-ಕಾಲೇಜುಗಳು ಪುನರಾರಂಭವಾಗುತ್ತಿದ್ದು ರಾಜ್ಯದಾದ್ಯಂತ ವಿದ್ಯಾರ್ಥಿಗಳು ಲೇಖಕ್ ನೋಟ್ ಬುಕ್‌ಗಳಿಗಾಗಿ ಅಂಗಡಿಗಳ ಮುಂದೆ ಪರದಾಡುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಅಗತ್ಯವಿರುವಷ್ಟು ಪ್ರಮಾಣದಲ್ಲಿ ಲೇಖಕ್ ನೋಟ್ ಬುಕ್‌ಗಳನ್ನು ಪೂರೈಕೆ ಮಾಡಬೇಕೆಂದು ಮತ್ತು ಸೂಕ್ತ ವಿತರಣಾ ವ್ಯವಸ್ಥೆ ಮಾಡಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರಾಜ್ಯ ಸಮಿತಿಯು ಸರ್ಕಾರವನ್ನು ಒತ್ತಾಯಿಸಿದೆ.

ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಸಹಕಾರಿ ಸಂಘಗಳ ಮಾದರಿ ಅಂಗಡಿಗಳನ್ನು ತೆರೆದು ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳು, ನೋಟ್ ಬುಕ್‌ಗಳು, ಬಟ್ಟೆ ಮತ್ತಿತರೆ ಸ್ಟೇಷನರಿ ಸಾಮಗ್ರಿಗಳನ್ನು ರಿಯಾಯಿತಿ ದರದಲ್ಲಿ ಒದಗಿಸಲು ಏರ್ಪಾಡು ಮಾಡಬೇಕೆಂದು ಸರ್ಕಾರವನ್ನು ಎಸ್.ಎಫ್.ಐ. ಒತ್ತಾಯಿಸಿದೆ. ಇದರಿಂದ ಎಲ್ಲ ವಿದ್ಯಾರ್ಥಿಗಳಿಗೂ ಶಿಕ್ಷಣ ಸಾಮಗ್ರಿಗಳು ಲಭ್ಯವಾಗುವುದಲ್ಲದೆ ಕಾಳಸಂತೆ ವ್ಯಾಪಾರವನ್ನು ತಡೆಗಟ್ಟಬಹುದು.

ರಾಜ್ಯದ ವಿದ್ಯಾರ್ಥಿ ಸಮುದಾಯದ ಪ್ರಮುಖ ಸಮಸ್ಯೆಗಳ ಪರಿಹಾರಕ್ಕಾಗಿ ಜನತಾ ಸರ್ಕಾರವನ್ನು ಒತ್ತಾಯಿಸಲು ಎಸ್.ಎಫ್.ಐ. ಮತ್ತಿತರೆ ವಿದ್ಯಾರ್ಥಿ ಸಂಘಟನೆಗಳೊಂದಿಗೆ ಸೇರಿ ಜುಲೈನಿಂದ ರಾಜ್ಯವ್ಯಾಪಿ ಚಳುವಳಿ ಪ್ರಾರಂಭಿಸಲಾಗುವುದೆಂದು ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕಾ। ಎಸ್. ಆರ್. ಆರಾಧ್ಯ ತಿಳಿಸಿದ್ದಾರೆ.

ರಾಯಚೂರು:

ಸಿ. ಪಿ. ಐ. (ಎಂ) ನಿಂದ ಧರಣಿ ಸತ್ಯಾಗ್ರಹ

13-6-83ರಂದು ರಾಯಚೂರು ಜಿಲ್ಲೆಯ ದುಡಿಯುವ ಜನತೆ, ಕೆಂಪು ಬಾವುಟಗಳನ್ನು ಹಿಡಿದು ತಮ್ಮನ್ನು ಸುಡುವ ಸಮಸ್ಯೆಗಳ ಪರಿಹಾರಕ್ಕಾಗಿ ಒತ್ತಾಯಿಸಿ ಘೋಷಣೆಗಳನ್ನು ಕೂಗುತ್ತ, ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯ ಮುಖಾಂತರ ನಗರಸಭೆಗೆ ಹೋಗಿ ಘೆರಾಯಿಸಿದರು. ನಗರಸಭೆಯ ಆವರಣದಲ್ಲಿ ಸಭೆ ನಡೆದು, ಕಾಂ॥ ಗುರುಸ್ವಾಮಿ ಸಭೆಯನ್ನು ಸ್ವಾಗತಿಸಿದರು. ಕಾಂ॥ ಚಂದ್ರಶೇಖರ್ ಬಾಳೆ, ಸಿ. ಪಿ. ಐ. (ಎಂ.) ಜಿಲ್ಲಾ ಸಮಿತಿ ಕಾರ್ಯದರ್ಶಿಯವರು ಸಭೆಯನ್ನುದ್ದೇಶಿಸಿ, ರಾಯಚೂರು ಜಿಲ್ಲೆಯ ಮುಖ್ಯ ಸಮಸ್ಯೆಗಳನ್ನು ಒತ್ತಾಯಿಸಿ, ಒಂದು ವರ್ಷದಿಂದ ಪಾರ್ಟಿ ಹೋರಾಡುತ್ತಲೇ ಬಂದಿದ್ದು, ಅದರಲ್ಲಿ ಜೀವನಕ್ಕೆ ಅತ್ಯವಶ್ಯವಾದ ನೀರು, ಮನೆಗಳಿಗಾಗಿ ಮೆರವಣಿಗೆ, ಪ್ರದರ್ಶನ, ಸತ್ಯಾಗ್ರಹ ನಡೆಸಲಾಗಿದ್ದರೂ ಯಾವ ಪ್ರಯೋಜನವಾಗಿಲ್ಲ. ಇಂದು ಅದೇ ಬೇಡಿಕೆಗಳಿಗಾಗಿ ಮತ್ತೊಮ್ಮೆ ಹೋರಾಟದ ಹಾದಿ ಹಿಡಿಯಬೇಕಾಗಿದೆ. ಆದರೆ ಇಂದು ಕಾಂಗ್ರೆಸ್ ಪಕ್ಷ ಅಧಿಕಾರದಿಂದ ಕೆಳಗಿಳಿದು ಜನತಾ ಸರ್ಕಾರ ಅಧಿಕಾರಕ್ಕೆ ಬಂದಿದೆ. ಇದಕ್ಕೆ ಹೊಣೆಗಾರರು ಜನತೆಯಾಗಿದೆ. ಆದಾಗ್ಯೂ ನಮ್ಮ ಬೇಡಿಕೆಗಳನ್ನು ಇಂದೂ ಈಡೇರುತ್ತವೆಂದು ಭಾವಿಸುವುದು ತಪ್ಪಾಗುತ್ತದೆ. ಯಾಕೆಂದರೆ ಒಂದು ಬಂಡವಾಳಶಾಹಿ ಪಕ್ಷ ಅಧಿಕಾರಕ್ಕೆ ಬಂದಿದೆ. ಈಗ ಕೆಲವು ಪ್ರಜಾಸತ್ತಾತ್ಮಕ ಹಕ್ಕುಗಳು ದೊರೆಯುವುದೇ ವಿನಃ ಜನತೆಯ ನಿಜವಾದ ವಿಮೋಚನೆಯಿಲ್ಲ. ಕಾರಣ ದುಡಿಯುವ ಜನತೆ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸಿ ದುಡಿಯುವ ಜನತೆಯ ವಿಮೋಚನೆಗೆ ದಾರಿ ಮಾಡಿಕೊಳ್ಳಬೇಕೆಂದು ಕರೆಕೊಟ್ಟರು.

ಕಾಂ॥ ಪುರುಷೋತ್ತಮ ಕಲಾಲಬಂದಿಯವರ ನೇತೃತ್ವದಲ್ಲಿ, ನಗರಸಭೆ ಕಮಿಷನರ್‌ರವರಿಗೆ ಮನವಿಯನ್ನು ಸಲ್ಲಿಸಿ, ದೀರ್ಘ ಚರ್ಚೆಯನ್ನು ನಡೆಸಿ ಕೂಡಲೇ ಕುಡಿಯುವ ನೀರಿನ ಸಮಸ್ಯೆಯನ್ನೂ ಹಾಗೂ ಕೊಳಚೆ ಪ್ರದೇಶದ ಅಭಿವೃದ್ಧಿ ಕ್ರಮವನ್ನೂ ಕೂಡಲೇ ತೆಗೆದುಕೊಳ್ಳದೆ ಹೋದಲ್ಲಿ ಚಳವಳಿಯನ್ನೇ ಶುರುಮಾಡಲಾಗುವುದೆಂದು ತಿಳಿಸಿದರು.

ನಗರಸಭೆಯಿಂದ ಮೆರವಣಿಗೆ ಮುಂದುವರಿದು ಜಿಲ್ಲಾಧಿಕಾರಿಯವರ ಕಛೇರಿಗೂ ಹೋಗಿ ಮನವಿಯನ್ನು ಸಲ್ಲಿಸಿ, ಜಿಲ್ಲೆಯ ಮುಖ್ಯ ಸಮಸ್ಯೆಗಳನ್ನೆಲ್ಲಾ ಒತ್ತಾಯಿಸಿ, ಸಾಯಂಕಾಲ ಆರು ಘಂಟೆಯವರೆಗೆ ನೂರಾರು ಜನ ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು ಧರಣಿ ಸತ್ಯಾಗ್ರಹ ನಡೆಸಿದರು.

ಸಭೆಯನ್ನುದ್ದೇಶಿಸಿ ಕಾಂ॥ ಪುರುಷೋತ್ತಮ ಕಲಾಲ ಬಂದಿಯವರು ಸುದೀರ್ಘ ಭಾಷಣ ಮಾಡಿದರು. ಜಿಲ್ಲಾಧಿಕಾರಿಯವರಿಗೆ ಕೊಟ್ಟ ಬೇಡಿಕೆಗಳನ್ನು ವಿವರಿಸಿದರು.

ಎಸ್. ಎಫ್. ಐ. ಹಿತೈಷಿಗಳಿಗೆ ಧನ್ಯವಾದಗಳು

ಇತ್ತೀಚೆಗೆ ದೆಹಲಿಗೆ ತೆರಳಿದ ಎಸ್. ಎಫ್. ಐ. ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ಕಾಂ॥ ಗುರುಶಾಂತ್ ಅವರ ಶಸ್ತ್ರ ಚಿಕಿತ್ಸೆಗೆ ಸುಮಾರು ಒಂದು ಸಾವಿರ ರೂ.ಗಳು ಖರ್ಚಾಗುವ ಸಂಭವವಿದೆಯೆಂದು ಎಸ್. ಎಫ್. ಐ. ನಗರ ಸಮಿತಿ ಜಿಲ್ಲಾ ಘಟಕಗಳಿಗೆ ಹಾಗೂ ಹೊಸಪೇಟೆ ಹಿತೈಷಿಗಳಿಗೆ ಧನಸಹಾಯ ಮಾಡಲು ವಿನಂತಿಸಿಕೊಂಡಿತ್ತು. ಇದನ್ನು ಗಮನಿಸಿದ ಜಿಲ್ಲೆಯ ಘಟಕಗಳೂ ಮತ್ತು ಹೊಸಪೇಟೆ ಹಿತೈಷಿಗಳು ಒಂದು ಸಾವಿರ ರೂಪಾಯಿಗಳನ್ನು ಸಹಾಯ ಮಾಡಿದ್ದಾರೆ. ಧನ ಸಹಾಯ ಮಾಡಿದ ಜಿಲ್ಲೆಯ ಘಟಕಗಳಿಗೆ ಹಾಗೂ ಹೊಸಪೇಟೆ ಹಿತೈಷಿಗಳಿಗೆ ಎಸ್.ಎಫ್.ಐ. ನಗರ ಸಮಿತಿ ವಂದನೆಗಳನ್ನು ಸಲ್ಲಿಸಿದೆ.

20ನೇ ವಾರ್ಷಿಕ ಮಹಾಸಭೆ

ಜಪ್ಪಿನಮೊಗರು ಗ್ರಾಮ ಯುವಕ ಮಂಡಲದ 20ನೇ ವಾರ್ಷಿಕ ಮಹಾಸಭೆಯು, ಜೆ. ಬಾಲಕೃಷ್ಣ ಶೆಟ್ಟಿ (ಅಳಪೆ ಪ್ರದೇಶ ಬೀಡಿ ಯೂನಿಯನ್ ಕಾರ್ಯದರ್ಶಿ) ಯವರ ಅಧ್ಯಕ್ಷತೆಯಲ್ಲಿ ತಾ: 19-6-1983ನೇ ಆದಿತ್ಯವಾರದಂದು ನಡೆಯಿತು.

ಯುವಕ ಮಂಡಲದ ಅಧ್ಯಕ್ಷ, ಜೆ. ಚಂದ್ರಹಾಸರವರು ಸ್ವಾಗತಿಸಿದರು. ಗತ ವರ್ಷದ ವರದಿಯನ್ನು ಸದಸ್ಯರಾದ ಅಪ್ಪಾಸ್ ಪಿ. ಸಿ. ಯವರು ಸಭೆಯ ಮುಂದಿಟ್ಟರು. 82-83ನೇ ವರ್ಷದ ಲೆಕ್ಕ-ಪತ್ರಗಳನ್ನು ಮಂಡಲದ ಉಪಾಧ್ಯಕ್ಷರಾದ ಉಮೇಶ ಅತಿಕಾರಿಯವರು ಮಂಡಿಸಿದರು.

ನೂತನ ಕಾರ್ಯಕಾರೀ ಸಮಿತಿಗೆ 14 (ಹದಿನಾಲ್ಕು) ಮಂದಿಯನ್ನು ಆರಿಸಲಾಯಿತು: ಜೆ. ಸದಾಶಿವ ಕಾರ್ಪೆಂಟರು (ಅಧ್ಯಕ್ಷರು) ಉಮೇಶ್ ಅತಿಕಾರಿ (ಉಪಾಧ್ಯಕ್ಷ) ಜೆ. ರಮೇಶ ಸುಲಾಯ (ಕಾರ್ಯದರ್ಶಿ), ಜೆ. ನಾರಾಯಣ ಅಂಚನ್ (ಜತೆ ಕಾರ್ಯದರ್ಶಿ) ದೇವಪ್ಪ ಕೆ. (ಕೋಶಾಧಿಕಾರಿ) ಹಾಗೂ ಕ್ರೀಡಾ ಕಾರ್ಯದರ್ಶಿಯಾಗಿ ಜೆ. ಜಯರಾಮ ಸುನೀಲ್‌ರವರನ್ನು ಸರ್ವಾನುಮತದಿಂದ ಆರಿಸಲಾಯಿತು.

ಸಭೆಯಲ್ಲಿ ಜಪ್ಪಿನಮೊಗ್ರು ಪಂಚಾಯತದ ಮಾಜಿ ಸಭಾಪತಿ ಶ್ರೀ ಜೆ. ಸದಾಶಿವಶೆಟ್ಟಿ, ಹಾಗೂ ಮಂಡಲದ ಸದಸ್ಯರಾದ—ಶ್ರೀ ಜೆ. ಇಸ್ಮಾಯಿಲ್ ಶ್ರೀ ಜೆ. ಕಲ್ಲತಡಮೆ, ಜೆ. ಸಂಜೀವ ಕಾರ್ಪೆಂಟರ್ ಮೊದಲಾದವರು ಸೂಕ್ತ ಸಲಹೆ-ಸೂಚನೆಗಳನ್ನಿತ್ತರು.

ಕೊನೆಯಲ್ಲಿ ಶ್ರೀ ಜೆ. ದೇವದಾಸ್ ಕೋಟ್ಯಾನ್‌ರವರು ಧನ್ಯವಾದಗಳನ್ನು ಸಮರ್ಪಿಸಿದರು.

ಕರ್ನಾಟಕ ರಾಜ್ಯದಲ್ಲಿ

ಎನ್. ಕೆ. ಉಪಾಧ್ಯಾಯ

ಹೋಮದಿಂದ ವಿಶ್ವಶಾಂತಿ

ವಿಶ್ವಶಾಂತಿಗಾಗಿ ಶ್ರೀ ಗಾಯತ್ರಿ ಮಹಾ ಕೋಟಿ ಹೋಮ. ಬೆಂಗಳೂರು ನಗರದಲ್ಲಿ ನಿರ್ಮಿಸಲಾದ ಗಾಯತ್ರಿ ಖೋಡೆ ನಗರದಲ್ಲಿ ಹನ್ನೊಂದು ದಿವಸ ಬೆಂಕಿಯಲ್ಲಿ ತುಪ್ಪ ಸುರಿಯುವುದೇ ಸುರಿಯುವುದು. ವೇದ ಪಾಠಗಳ ಕೂಗು ಕೇಳುವುದೇ ಕೇಳುವುದು. ಈ ಪ್ರಕಟಣೆ ಹೊರಡಿಸಿದವರು ಶ್ರೀ ಹರಿ ಖೋಡೆಯವರು.

ಖೋಡೆಯವರ ಹೆಸರು ಕೇಳದವರು ಬಹುತೇಕ ಯಾರಿರಲಿಕ್ಕಿಲ್ಲ. ನಿಶೆಯನ್ನುಂಟುಮಾಡುವ ನಾನಾ ತರದ ಪಾನೀಯಗಳನ್ನು (ವಿಸ್ಕಿ, ಬ್ರಾಂದಿ, ರಮ್‌ಮುಂತಾದವುಗಳು) ಉತ್ಪಾದಿಸಿ, ದಿನನಿತ್ಯ ಲಕ್ಷಾವಧಿ ಜನರ ಚಿಂತೆ ಪರಿಹರಿಸಿ, ಸಂಸಾರಗಳನ್ನು ಹಾಳುಮಾಡುವ ಮಹಾಪುತ್ರರೇ ಇವರು. ತಮ್ಮ ಹಲವಾರು ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಸಾವಿರಾರು ಕಾರ್ಮಿಕರ ಶ್ರಮದಿಂದ ಅಪಾರ ಲಾಭ ಗಳಿಸುತ್ತಿರುವ ದೊಡ್ಡ ಮಾಲಕ. ರಾಜಕಾರಣಿಗಳನ್ನು ಕೊಂಡುಕೊಂಡು, ಸರಕಾರವನ್ನೂ, ಜನರನ್ನೂ ಹೋಮಕುಂಡಕ್ಕೆಳೆಯುವ ಮಹಾ ವ್ಯಕ್ತಿ. ತನ್ನ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಸಾವಿರಾರು ಕಾರ್ಮಿಕರನ್ನು ಅರೆ ಹೊಟ್ಟೆಯಲ್ಲಿ ಬದುಕುವಂತೆ ಮಾಡಿ, ಸ್ವರ್ಗಕ್ಕೆ ಹೋಗಲು ಅವರಿಗೆಲ್ಲ ಹತ್ತಿರದ ದಾರಿ ತೋರಿಸುತ್ತಿರುವ ಹರಿ ಖೋಡೆಯವರು ವಿಶ್ವ ಕಲ್ಯಾಣಕ್ಕೆ ಹೊರಟಿದ್ದಾರೆ.

ಐತಿಹಾಸಿಕ ಪ್ರಸಿದ್ಧವಾದ ಭವ್ಯ ಹಿಂದೂ ಧರ್ಮದ ಪರಂಪರೆಯ ಜ್ಯೋತಿಯನ್ನು ಬೆಳಗಿಸಲು ಈ ಹೋಮ ಏರ್ಪಡಿಸಲಾಗಿದೆಯಂತೆ. ಇಷ್ಟೇ ಅಲ್ಲದೆ ಈಗಾಗಲೇ ಬಡ ಕಾರ್ಮಿಕರ ಶ್ರಮದಿಂದ ಸಂಪಾದಿಸಿದ ಲಾಭದಿಂದ ಸಂತುಷ್ಟರಾಗದೆ, ಸದರಿ ಹೋಮಕ್ಕೆ ಚಂದಾಗಳನ್ನು ಕೃತಜ್ಞತೆಯಿಂದ ಸ್ವೀಕರಿಸಲಾಗುವುದೆಂದು ಹೇಳಿ ಹಣ ದೋಚಲು ಬ್ಯಾಂಕಿನ ಹೆಸರನ್ನೂ ಸಹ ತಿಳಿಸಿದ್ದಾರೆ. ತನ್ನ ಬೊಕ್ಕಸ ತುಂಬಿದರೆ ಹಿಂದೂ ಧರ್ಮದ ಜ್ಯೋತಿಯೂ ಬೆಳಗುತ್ತದೆ, ವಿಶ್ವ ಕಲ್ಯಾಣವೂ ಆಗುತ್ತದೆ.

ಕೋಟ್ಯಾವಧಿ ಜನತೆ ಎದುರಿಸುತ್ತಿರುವ ನೂರಾರು ಕ್ಲಿಷ್ಟ ಸಮಸ್ಯೆಗಳ ಪರಿಹಾರ ಕಂಡುಹಿಡಿಯಲು ಅಸಮರ್ಥರಾದ ಈ ಸಮಾಜದ ಮುಖಂಡರು, ಜನ ಜಾಗೃತಗೊಂಡು ಹೋರಾಟದ ಕಣಕ್ಕಿಳಿಯುತ್ತಿರುವುದನ್ನು ಕಂಡು ಅವರ ಗಮನವನ್ನು ಬೇರೆಡೆ ಸೆಳೆಯಲು ಜನರಲ್ಲಿ ಮೂಡಿರುವ ಮೂಢ ಭಾವನೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ.

ಹೋಮದಿಂದ ವಿಶ್ವಶಾಂತಿ ಆಗುತ್ತದೆಯೇ ? ಮಳೆ ಬರುತ್ತದೆಯೇ ? ಬಡತನ ದೂರವಾಗುತ್ತದೆಯೇ ? ಹಾಗಿದ್ದರೆ, ನಮ್ಮ ದೇಶದಲ್ಲಿ ಎಷ್ಟು ಕಡೆ ಪೂಜೆ, ಹೋಮ, ಪ್ರಾರ್ಥನೆ, ಹವನಗಳು ನಡೆಯುತ್ತ ಬಂದಿವೆ. ಆದರೆ ದೇಶದ, ಜನತೆಯ ಸಮಸ್ಯೆಗಳು ಮತ್ತಷ್ಟು ಉಲ್ಬಣಗೊಳ್ಳಲು ಕಾರಣವೇನು ? ಬಂಡವಾಳಶಾಹಿ ಪದ್ಧತಿಯೇ ಇದಕ್ಕೆಲ್ಲ ಮೂಲ ಕಾರಣವಲ್ಲದೆ ಮತ್ತೇನಲ್ಲವೆಂಬುದನ್ನು ತಿಳಿಯಬೇಕು.

ರಶ್ಯಾ, ಚೀನಾ ಮೊದಲಾದ ಸಮತಾವಾದಿ ದೇಶಗಳಲ್ಲಿ ಹೋಮ, ಪೂಜೆಗಳು ನಡೆಯುತ್ತಿಲ್ಲ. ಆದರೆ ಅಲ್ಲಿಯ ಜನ ವಿಶ್ವಶಾಂತಿಗಾಗಿ ಪಣ ತೊಟ್ಟಿದ್ದಾರೆ. ಹೋಮ, ಪೂಜೆ, ಪ್ರಾರ್ಥನೆಗಳಲ್ಲಿ ಮೈ ಮರೆತಿರುವ ನಾವು ದಿನನಿತ್ಯ ಎದುರಿಸುತ್ತಿರುವ, ಬೆಲೆಯೇರಿಕೆ, ನಿರುದ್ಯೋಗ, ಭ್ರಷ್ಟಾಚಾರ, ಬಡತನ. ಸುಲಿಗೆಗಳನ್ನು ಸಮತಾವಾದಿ ದೇಶದ, ಜನತೆ ಅನುಭವಿಸುತ್ತಿಲ್ಲ. ಯಾಕೆ? ಉತ್ಪಾದನೆ ಸಾಧನಗಳೆಲ್ಲ ಸಮಾಜದ ಸೊತ್ತಾಗಿವೆ ಟಾಟಾ, ಬಿರ್ಲಾ, ಖೋಡೆಯಂಥವರು ಅಲ್ಲಿಲ್ಲ. ಕೆಲವೇ ಜನರು ಶ್ರೀಮಂತರಾಗಿ ಅಸಮಾನತೆ ಉಂಟುಮಾಡುವ ಅವಕಾಶವಿಲ್ಲ. ಆದ್ದರಿಂದ ಅಲ್ಲಿಯ ಜನರಿಗೆ ವಿಶ್ವಶಾಂತಿಗಾಗಿ ಹೋರಾಡಲು ಯಾವ ಹೋಮ, ಪ್ರಾರ್ಥನೆಗಳ ಅಗತ್ಯವಿಲ್ಲ.

ಜನರ ಮೌಢ್ಯವನ್ನು ಬೆಳೆಸುವ ಇಂಥ ಧಾರ್ಮಿಕ ಕ್ರಮಗಳನ್ನು ವಿರೋಧಿಸಬೇಕು. ಅವುಗಳ ವಿರುದ್ಧ ಹೋರಾಡಬೇಕು. ಇಂಥ ಮೋಸ, ಸುಲಿಗೆಗಳ ವಿರುದ್ಧ ಜನರನ್ನು ಸಂಘಟಿಸಬೇಕು.

ರಾಜ್ಯದ ರಾಜಕೀಯ ಪಕ್ಷಗಳು

ರಾಜ್ಯದ ರಾಜಕೀಯ ಪಕ್ಷಗಳಲ್ಲಿ ಹೊಸ ಬದಲಾವಣೆಗಳುಂಟಾಗಿವೆ. ಗುಂಡೂರಾವ್ ಸರಕಾರವನ್ನು ಸೋಲಿಸಲಿಕ್ಕೆ ಹೋದ ಚುನಾವಣೆಯಲ್ಲಿ ಜನತಾಪಕ್ಷ ಸಿ ಪಿ ಐ (ಎಂ), ಸಿಪಿಐ. ಜೊತೆ ಸೇರಿಕೊಂಡಿದ್ದ ಬಂಗಾರಪ್ಪನವರು ತಮ್ಮನ್ನು ಮುಖ್ಯಮಂತ್ರಿಯನ್ನಾಗಿ ಆರಿಸಲಿಲ್ಲೆಂಬ ಒಂದೇ ಕಾರಣದಿಂದ ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಂಡು ಹೆಗಡೆ ಸರಕಾರಕ್ಕೆ ಬೆಂಬಲ ಕೊಡುತ್ತ ಬಂದಿದ್ದರು. ಆದರೆ ಈಗ ಬಂಗಾರಪ್ಪ ಗುಂಪಿನ ಕ್ರಾಂತಿರಂಗದ ವಿಧಾನಸಭಾ ಸದಸ್ಯರು ಜನತಾ ಸರಕಾರಕ್ಕೆ ಕೊಡುತ್ತಿದ್ದ ಬೆಂಬಲವನ್ನು ಹಿಂತೆಗೆದುಕೊಂಡಿರುವುದಾಗಿ ಸಾರಿದ್ದಾರೆ. ಇದರಲ್ಲಿ ಆಶ್ಚರ್ಯಪಡಬೇಕಾದ್ದೇನಿಲ್ಲ ಜನತಾ-ಕ್ರಾಂತಿರಂಗ ಶಾಸಕರೆಲ್ಲ ರಾಮಕೃಷ್ಣ ಹೆಗಡೆಯವರನ್ನು ಮುಖಂಡರನ್ನಾಗಿ ಆರಿಸಿದಂದಿನಿಂದಲೂ ನಿರಾಶೆಗೊಂಡ ಬಂಗಾರಪ್ಪನವರು ಹೆಗಡೆ ಸರಕಾರದ ವಿರುದ್ಧ ನೀತಿಯನ್ನೇ ಅನುಸರಿಸುತ್ತ ಬಂದಿದ್ದಾರೆ. ಆದರೆ ಕರ್ನಾಟಕದ ಜನತೆಯ ಮನೋಭಾವವನ್ನು ತಿಳಿದುಕೊಳ್ಳುವಲ್ಲಿ ಬಂಗಾರಪ್ಪನವರು ವಿಫಲಗೊಂಡಿದ್ದಾರೆಂದೂ, ಸರ್ವಾಧಿಕಾರಿ ವಿರೋಧಿ ಚಳುವಳಿಯಲ್ಲಿ ಅವರು ಮಹತ್ವದ ಪಾತ್ರ ವಹಿಸುವುದು ಆಗತ್ಯವೆಂದೂ ಹೇಳಲಿಚ್ಛಿಸುತ್ತೇವೆ.

ರಾಜ್ಯದ ಬಿ ಜೆ ಪಿ ಯಲ್ಲಿ ಹೊಸ ಮುಖಂಡತ್ವ ಸುಬ್ಬಯ್ಯನವರ ಬಾಯಿ ಮುಚ್ಚಿಸುವುದರಲ್ಲಿ ವಿಫಲಗೊಂಡಿದ್ದರೂ ಕೂಡ ತಮ್ಮೊಳಗೆ ಮೂಲ ಭಿನ್ನಾಭಿಪ್ರಾಯವಿದೆಂಬುದನ್ನು ಬಹಿರಂಗಗೊಳಿಸುವಲ್ಲಿ ಯಶಸ್ವಿಯಾಗಿದೆ. ಹೆಗಡೆ ಸರಕಾರಕ್ಕೆ ತಮ್ಮ ಬೆಂಬಲವನ್ನು ವಾಪಸ್ ಪಡೆಯುತ್ತೇವೆಂದು ಹೇಳಿಕೆ ಕೊಡುತ್ತಿರುವಾಗಲೇ ಆರ್‌ಎಸ್‌ಎಸ್ ಪರ ಬಿಜೆಪಿ ಮುಖಂಡರು ಹೆಗಡೆ ಸರಕಾರದ ಪೂರ್ಣಾವಧಿಯವರೆಗೆ ಅದಕ್ಕೆ ಸಹಕಾರ ನೀಡುವುದಾಗಿ ಸಾರಿದ್ದಾರೆ. ಬಂಗಾರಪ್ಪ ತನ್ನ ಬೆಂಬಲ ಹಿಂತೆಗೆದುಕೊಂಡರೂ ಕೂಡ ಬಿಜೆಪಿ ಬೆಂಬಲ ಹೆಗಡೆ ಸರಕಾರಕ್ಕಿದೆಯೆಂದು ಇದು ತೋರಿಸಿಕೊಡುತ್ತದೆ. ಆದರೆ ರಾಜ್ಯದ ರಾಜಕೀಯದ ದೃಷ್ಟಿಯಿಂದ ಇದು ಅಪಾಯಕಾರಿ ಯಾಕೆಂದರೆ ಬಿಜೆಪಿ ಬೆಂಬಲದಿಂದ ಹೆಗಡೆ ಅಧಿಕಾರದಲ್ಲುಳಿಯುವುದು ಸ್ವಚ್ಛ ರಾಜಕೀಯದ ದೃಷ್ಟಿಯಿಂದ, ಎಡಶಕ್ತಿಗಳ ಬೆಳವಣಿಗೆ ದೃಷ್ಟಿಯಿಂದ ಸರಿಯಲ್ಲವೆಂದೇ ಹೇಳಬೇಕಾಗುತ್ತದೆ.

ಬಹಳ ತಿಂಗಳಿಂದ ನೆನೆಗುದಿಗೆ ಬಿದ್ದಿದ್ದ ಕರ್ನಾಟಕ ರಾಜ್ಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಪದವಿಯ ಸಮಸ್ಯೆ ಕೊನೆಗೊಮ್ಮೆ ಪರಿಹಾರವಾದಂತಾಗಿದೆ ಹಳೇ ಹುಲಿ ಕೆ. ಎಚ್. ಪಾಟೀಲರನ್ನು ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಈ ಸ್ಥಾನವನ್ನಾಕ್ರಮಿಸಲು ಗುಂಡೂರಾವ್ ಮತ್ತು ವೀರಪ್ಪಮೊಯಿಲಿಯವರು ಶತ ಪ್ರಯತ್ನ ನಡೆಸಿದ್ದರು. ಕೊಳೆತು ನಾರುವ ಕೊಂಪೆಯಲ್ಲಿ ಮುಳುಗುತ್ತಿರುವ ಕಾಂಗ್ರೆಯನ್ನು ಮೇಲಕ್ಕೆತ್ತಲು ಕೆ. ಎಚ್. ಪಾಟೀಲರಿಂದ ಸಾಧ್ಯವೇ ಹೇಗೆಂಬುದನ್ನು ಕಾದು ನೋಡಬೇಕಾಗಿದೆ. ಹೊಸ ಅಧ್ಯಕ್ಷರೊಡನೆ ಸಹಕರಿಸುವುದಾಗಿ ಎರಡೂ ಗುಂಪಿನವರೂ, ಹಂಗಾಮಿ ಅಧ್ಯಕ್ಷ ಮಲ್ಲಣ್ಣನವರೂ ಹೇಳಿದ್ದರೂ ಕೂಡ, ಮನಃಪೂರ್ವಕವಾಗಿ ಆ ಹೇಳಿಕೆಗಳು ಹೊರಬಂದಿಲ್ಲೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ.

ನಾಮರೆಡ್ಡಿಯಾಗಿರುವ ಕೆ. ಎಚ್. ಪಾಟೀಲರು ಎಲ್ಲ ಗುಂಪುಗಳನ್ನು ಒಂದು ಸೇರಿಸಿ ಕಾಂಗ್ರೆಸ್ಸಿಗೆ ಜೀವಕಳೆ ತುಂಬುವಲ್ಲಿ ಯಶಸ್ವಿಯಾಗುತ್ತಾರೆಯೇ ಎಂಬುದನ್ನು ನೋಡಬೇಕಾಗಿದೆ. ಗುಂಡೂರಾವ್-ವೀರಪ್ಪ ಮೊಯಲಿಯವರು ಕೆ. ಎಚ್. ಪಾಟೀಲರ ನೇಮಕಕ್ಕೆ ನೀರು ಬಿಡಲು ಈಗಿನಿಂದಲೇ ಪ್ರಾರಂಭಿಸಿದ್ದಾರೆಂಬ ಸುದ್ದಿ ಹಬ್ಬಿದೆ. ಕಾರಣ ಶತಾಯಗತಾಯ ಕೆ.ಎಚ್. ಪಾಟೀಲರ ಕುರ್ಚಿ ಎಷ್ಟು ದಿವಸ ಭದ್ರ ಉಳಿಯುತ್ತದೆ ಕಾದು ನೋಡೋಣ ನಮಗೇನು ಹಾನಿ.

ಗ್ರಾಮಾಂತರ ಪ್ರದೇಶಗಳ ಸಮಸ್ಯೆಗಳು

ವಿಶ್ವಕಲ್ಯಾಣಕ್ಕಾಗಿಯೂ, ಹಿಂದೂ ಧರ್ಮದ ಪರಂಪರೆಯನ್ನುಳಿಸಲೂ ಹರಿ ಖೋಡೆಯವರು ಮಹಾಕೋಟಿ ಹೋಮವನ್ನು ಏರ್ಪಡಿಸುತ್ತಿರುವಾಗ ಗ್ರಾಮಾಂತರ ಪ್ರದೇಶದ ಜನತೆ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ಚಿಂತೆಗೊಳಗಾಗಿದ್ದಾರೆ. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ-ಹಡಗಲಿ ತಾಲ್ಲೂಕಿನ ಹಳ್ಳಿಗಳಲ್ಲಿ ಸಂಚಾರ ಮಾಡಿದಾಗ ನಾವು ಗಳಿಸಿದ ಸ್ವಾತಂತ್ರ್ಯದ ನಿಜ ಅರ್ಥ ಏನೆಂಬುದು ಅಲ್ಲಿಯ ಜನರಿಗೆ ಅರ್ಥವಾಗದಿರುವುದು ಕಂಡು ಬರುತ್ತದೆ. ಬ್ರಿಟಿಷರು ಹೋದರು, ಕಾಂಗ್ರೆಸ್ ಬಂತು. ಈಗ ರಾಜ್ಯದಲ್ಲಿ ಜನತಾ ಸರ್ಕಾರ ಬಂತು. ಆದರೆ ಬಳ್ಳಾರಿ ಜಿಲ್ಲೆಯ ಹಳ್ಳಿಗಾಡು ಪ್ರದೇಶಗಳಲ್ಲಿ ಮಾತ್ರ ಹೇಳಿಕೊಳ್ಳುವಂಥ ಬದಲಾವಣೆ ಉಂಟಾಗದಿರುವ ದೃಶ್ಯ ಕಂಡು ಬರುತ್ತಿದೆ. ಭೂಮಾಲಕರ, ಸಾಹುಕಾರರ ಬಡ್ಡಿ ವ್ಯವಹಾರಗಳ ದಳ್ಳಾಳಿಗಳ ಹಿಡಿತ ಹಿಂದಿನಂತೆಯೇ ಮುಂದುವರಿದಿದೆ. ಶ್ರೀಮಂತವರ್ಗ, ನೌಕರದಾರವರ್ಗ, ಬಡವರವರ್ಗ-ಇದು ಎದ್ದು ಕಾಣುವ ದೃಶ್ಯ. ದೊಡ್ಡ ಹಿಡುವಳಿದಾರರು ನಿಶ್ಚಿಂತೆಯಿಂದ ಸಾಗುವಳಿ ಮಾಡುತ್ತ, ಬೆಳೆ ಬೆಳೆಯುತ್ತ, ಬೆಳೆಗಳನ್ನು ಲಾಭಕ್ಕಾಗಿ ಮಾರುತ್ತ, ಕೃಷಿ ಉತ್ಪನ್ನ ಮಾರುಕಟ್ಟೆ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್, ಸೊಸೈಟಿಗಳನ್ನೆಲ್ಲ ತಮ್ಮ ಹಿಡಿತದಲ್ಲಿಟ್ಟುಕೊಂಡು, ರುದ್ರಪ್ಪನ ರೈತ ಸಂಘದ ನೇತೃತ್ವದಲ್ಲಿ, ಸಾಲಗಳನ್ನೆಲ್ಲಾ ಮನ್ನಾ ಮಾಡಬೇಕೆಂದು ಬೊಬ್ಬೆಹೊಡೆಯುತ್ತಿರುವುದು ಒಂದು ದೃಶ್ಯ. ತಾಲ್ಲೂಕು ಬೋರ್ಡು ಸದಸ್ಯರು, ರಾಜಕೀಯ ದಳ್ಳಾಳಿಗಳು, ಕೃಷಿ ಉತ್ಪನ್ನ ಮಾರುಕಟ್ಟೆಯವರು ಬಡ, ಮಧ್ಯಮ ರೈತರ ಅವಶ್ಯಕತೆಗಳ ದುರುಪಯೋಗ ಮಾಡಿಕೊಂಡು, ಅವರಿಗೆಲ್ಲಾ ಆಸೆ, ಆಮಿಶ ತೋರಿಸಿ ಸುಲಿಯುವ, ಮೋಸ ಮಾಡುವ ದೃಶ್ಯ ಇನ್ನೊಂದೆಡೆ. ಪುಡಾರಿಗಳೂ, ನೌಕರದಾರರೂ, ಅಧಿಕಾರಿಗಳೂ ಸೇರಿ ಸುಳ್ಳು ಹೇಳಿ ಲಂಚ ತಿನ್ನುವ ದೃಶ್ಯ. ಹಾಗೆಯೇ ಜನತಾ ಮನೆ, ರಸ್ತೆ, ಆಸ್ಪತ್ರೆ, ನೀರಾವರಿಗಳಿಗಾಗಿ ಪರದಾಡುವ ಜನಸಮೂಹ ಒಂದೆಡೆ — ಹೀಗೆ ಗ್ರಾಮಾಂತರ ಪ್ರದೇಶಗಳ ಸ್ವರ್ಣ ಚಿತ್ರ ಕಣ್ಣಿಗೆ ಬೀಳುತ್ತಿದೆ. ಮಂತ್ರಿ ಆಶೀರ್ವಾದ ಇರುವ ತನಕ ಬಡಜನರ ಆರೋಪಗಳಿಗೆ ಅಂಜುವುದಿಲ್ಲೆಂದು ಜಂಭ ಕೊಚ್ಚಿಕೊಳ್ಳುವ ಅಧಿಕಾರಿಗಳನ್ನು ಈಗಲೂ ನೋಡಬಹುದು. ಹರಪನಹಳ್ಳಿ ತಾಲ್ಲೂಕಿನ ಕಸವನಹಳ್ಳಿ ಗ್ರಾಮಕ್ಕೆ ಹತ್ತು ಜನತಾ ಮನೆ ಮಂಜೂರಾಗಿದ್ದು, ಒರೇ ಒಂದು ಬಾಗಿಲಿನ ಚೌಕಟ್ಟನ್ನು ಕೊಟ್ಟು ಬಾಕಿ ಹಣವನ್ನೆಲ್ಲ ಬಿ. ಡಿ. ಓ ಸದಸ್ಯರು, ಗ್ರಾಮ ಸೇವಕರು ತಿಂದು ಹಾಕಿದ್ದರು. ರೈತರು ಮತಪ್ರದರ್ಶನ ಮಾಡಿದಾಗ ನಿಜ ಸಂಗತಿಯನ್ನು ಬಿ.ಡಿ.ಓ. ಸಮಕ್ಷಮ ಒಪ್ಪಿಕೊಳ್ಳಲಾಗಿತ್ತು. ಅನಂತರ ಅದಕ್ಕೆ ಆಧಾರವಿಲ್ಲವೆಂದು ಕೈಬಿಡಲಾಯಿತು. ಹಳ್ಳಿಗಳಲ್ಲಿ ದಿನನಿತ್ಯ ನಡೆಯುವ ಘಟನೆಗಳಿವು. ಇವುಗಳಿಗೆ ಪರಿಹಾರ ಹರಿ ಖೋಡೆಯವರ ಹೋಮವಲ್ಲ. ಬಲವಾದ ರೈತ ಸಂಘಟನೆ, ರೈತ-ಕೃಷಿ ಕಾರ್ಮಿಕರ ಹೋರಾಟ. ಚುನಾವಣೆ ಬಂದಾಗ ಮತ ಹಾಕುವುದನ್ನು ಬಿಟ್ಟರೆ, ಈ ಜನ ತಮ್ಮ ಹೊಲ, ಮನೆ, ಒಕ್ಕಲುತನದಲ್ಲೇ ಮಗ್ನರಾಗಿರುತ್ತಾರೆ. ಬೆಳಗಿನ ಜಾವ 5 ಘಂಟೆಯಿಂದ ಸಂಜೆಯವರೆಗೂ ಬೇರೆ ಚಿಂತೆ ಮಾಡಲು ಇವರಿಗೆ ಕಾಲಾವಕಾಶವಿಲ್ಲ. ಕೆಲವು ಪುಡಾರಿಗಳು, ಅಧಿಕಾರಿಗಳು, ನೌಕರದಾರರು ಇವರ ದುರುಪಯೋಗ ಮಾಡುತ್ತಿದ್ದಾರೆ. ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಇಂಥ ಪರಿಸ್ಥಿತಿಯಿಂದ ರೈತರನ್ನು ಮುಕ್ತಗೊಳಿಸಬೇಕು. ಅದಾಗಬೇಕಾದರೆ, ನಿಷ್ಠಾವಂತ ಕಾರ್ಯಕರ್ತರೂ, ರೈತ ಚಳವಳಿಯೂ ಅತ್ಯಗತ್ಯ.

ಕೃಷಿ ಉತ್ಪಾದನೆ ಬೆಲೆ ನಿಗದಿ

ಆಯಾ ರಾಜ್ಯಗಳಲ್ಲಿ ಬೆಳೆಯುತ್ತಿರುವ ಬೆಳೆಗಳಿಗೆ ಪ್ರತಿ ವರ್ಷ ಬೆಲೆ ನಿಗದಿಯಾಗುವುದು ಅತ್ಯವಶ್ಯ. ಈಗ ಕೇಂದ್ರ ಸರಕಾರವೇ ಈ ಜವಾಬ್ದಾರಿಯನ್ನು ಹೊತ್ತುಕೊಂಡಿದೆ. ಸಕಾಲದಲ್ಲೇ ಬೆಲೆ ನಿಗದಿಯಾದರೆ ರೈತರೆಲ್ಲ ಉತ್ಸಾಹದಿಂದ ಕೆಲಸ ಮಾಡಲು ಪ್ರೋತ್ಸಾಹ ನೀಡಿದಂತಾಗುತ್ತದೆ. ಆ ದೃಷ್ಟಿಯಲ್ಲಿ ನೋಡುವಾಗ ಕೇಂದ್ರ ಸರಕಾರ ಬೆಲೆ ನಿರ್ಧರಿಸುವ ಕಾರ್ಯದಲ್ಲಿ ವಿಫಲಗೊಂಡಿದೆಯೆಂದೇ ಹೇಳಬೇಕು.

ರಸಾಯನಿಕ ಗೊಬ್ಬರ, ಬೀಜ, ಉಳುಮೆಯ ಖರ್ಚು, ಕೂಲಿ ಮೊದಲಾದವುಗಳ ಬೆಲೆ ಹೆಚ್ಚಳದಿಂದಾಗಿ ಬೇಸಾಯದ ಖರ್ಚು ಹೆಚ್ಚಾಗುತ್ತಿದೆ. ಹಲವಾರು ಸಲ ಪ್ರಕೃತಿಯ ಪ್ರಕೋಪಕ್ಕೂ ತುತ್ತಾಗಬೇಕಾಗುತ್ತದೆ. ಅದರಿಂದಲೂ ಹಾನಿ ಅನುಭವಿಸಬೇಕಾಗುತ್ತದೆ. ಇಂಥ ಹಲವಾರು ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಬೆಳೆಯ ಬೆಲೆ ನಿರ್ಧರಿಸಬೇಕಾಗುತ್ತದೆ. ಆ ರೀತಿಯಲ್ಲಿ ಆಗುತ್ತಿಲ್ಲೆಂಬ ಕಾರಣದಿಂದಲೇ ಪ್ರತಿ ವರ್ಷ ರೈತರು ಚಳುವಳಿ-ಪ್ರತಿಭಟನೆ ನಡೆಸಬೇಕಾಗುತ್ತದೆ.

ಒಂದೆಡೆ ಸರಕಾರದವರು ನಿರ್ಧರಿಸಿದ ಬೆಲೆ ಕಡಿಮೆಯಾಗಿರುವಾಗ, ಬಹಿರಂಗ ಪೇಟೆಯಲ್ಲಿ ವ್ಯಾಪಾರಸ್ಥರು ಹೆಚ್ಚು ಬೆಲೆ ತೆತ್ತು ಕೊಂಡುಕೊಳ್ಳುತ್ತಿರುವುದು ಕಂಡುಬರುತ್ತಿದೆ.

(6ನೇ ಪುಟ ನೋಡಿ)

ವಿರೋಧ ಪಕ್ಷಗಳ ಮೇಲೆ ಇಂದಿರಾ ಆರೋಪ

ತನ್ನ ತಪ್ಪು ಧೋರಣೆಗಳಿಂದಾಗಿ ದೇಶದ ಸಮಸ್ಯೆಗಳನ್ನು ಬಗೆ ಹರಿಸಲು ಅಸಮರ್ಥರಾದ ಇಂದಿರಾಗಾಂಧಿಯವರು 5 ಪಾಶ್ಚಿಮಾತ್ಯ ದೇಶಗಳ ಸಂಚಾರ ಮುಗಿಸಿಕೊಂಡು ಬಂದ ಕೂಡಲೇ ವಿರೋಧ ಪಕ್ಷಗಳ ಮೇಲೆ ಕಿಡಿ ಕಾರಿಕೊಳ್ಳಲು ಪ್ರಾರಂಭಮಾಡಿದ್ದಾರೆ. "ನೋಡಿ. ಅವರಿಂದಲೇ ಎಲ್ಲ ಹಾಳಾಗಿದೆ" ಎಂದು ಬೊಟ್ಟು ಮಾಡಿ ತೋರಿಸುತ್ತಿದ್ದಾರೆ.

ತಮ್ಮ ವಿದೇಶ ಸಂಚಾರವನ್ನು ಮುಗಿಸಿಕೊಂಡು ಬರುತ್ತಿರುವಾಗಲೇ ಚುನಾವಣೆಯಲ್ಲಿ ಸೋಲು, ಪಂಜಾಬನ್ನೊಳಗೊಂಡ ಪರಿಹಾರವಾಗದಿರುವ ಹಲವಾರು ರಾಜಕೀಯ ಸಮಸ್ಯೆಗಳು, ಭೀಕರ ಆರ್ಥಿಕ ಬಿಕ್ಕಟ್ಟು, ತನ್ನ ಪಾರ್ಟಿ ಸಂಘಟನೆಯನ್ನೇ ಕೊರೆಯುತ್ತಿರುವ "ಭಿನ್ನಮತೀಯರ" ಜಾಡ್ಯ ಮುಂತಾದ ಮಹಾ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು ಇಂದಿರಾ ಗಾಂಧಿಯವರಿಗೆ. ಜನರನ್ನೂ, ದೇಶವನ್ನೂ ಎದುರಿಸುತ್ತಿರುವ ಇಂಥ ಸಮಸ್ಯೆಗಳ ಪರಿಹಾರ ಕಂಡು ಹಿಡಿಯಬೇಕಾದರೆ ವಿರೋಧ ಪಕ್ಷಗಳ ಕುರಿತು ಸಂಯಮನ, ತಾಳ್ಮೆ ಅತ್ಯಗತ್ಯ. ಆದರೆ ಇಂದಿರಾಗಾಂಧಿಗೆ ಅಂಥ ಗುಣ ಎಲ್ಲಿಂದ ಬರಬೇಕು.

ವಿರೋಧ ಪಕ್ಷಗಳನ್ನು ಟೀಕಿಸುವಂಥ ನೇರಕ್ರಮದಿಂದಲೇ ದೇಶದ ಸಮಸ್ಯೆಗಳಿಗೆ ಪರಿಹಾರ ಕಂಡಹಿಡಿಯಬಹುದೆಂಬ ಒಣ ಪ್ರತಿಷ್ಠೆ ಇಂದಿರಾ ಗಾಂಧಿಯನ್ನು ಕಾಡುತ್ತಿರುವಂತೆ ಕಾಣುತ್ತದೆ. ಅಸ್ಸಾಂ, ಪಂಜಾಬ್‌ಗಳಂಥ ಸಮಸ್ಯೆಗಳ ಕುರಿತು ತಮ್ಮ ಸೂಚನೆ–ಸಲಹೆಗಳನ್ನಿತ್ತ ವಿರೋಧ ಪಕ್ಷಗಳ ಹಾಗೆಯೇ ತನ್ನ ಪಾರ್ಟಿಯ ಮುಖಂಡರೊಡನೆ ತಾಳ್ಮೆಯಿಂದ ವಿಚಾರ ವಿನಿಮಯ ಮಾಡುವ ಕ್ರಮವನ್ನು ಬಿಟ್ಟುಕೊಟ್ಟು ವಿಮಾನದಿಂದಿಳಿದ ಕೂಡಲೇ ಅಕಾಲಿ ದಳ ಮತ್ತು ವಿರೋಧಪಕ್ಷಗಳು ಪಂಜಾಬ್ ಸಮಸ್ಯೆಗಳನ್ನು ಮತ್ತಷ್ಟು ಬಿಗಿಗೊಳಿಸುತ್ತಿವೆಯೆಂಬ ಆರೋಪ ಹೊರಿಸಿದ್ದಾರೆ. ಹಾಗೆಯೇ ನದಿ ನೀರು. ಗಡಿ ಸಮಸ್ಯೆಗಳಂಥವುಗಳನ್ನು ಬಗೆ ಹರಿಸಲು ಏನು ಮಾಡಿದ್ದಾರೆಂಬ ಪ್ರಶ್ನೆ ಕೇಳಿದ್ದಾರೆ.

ಮೂವತ್ತು ವರ್ಷ ರಾಜ್ಯವನ್ನಾಳಿದ ಒಂದು ರಾಜಕೀಯ ಪಕ್ಷದ ಮುಖಂಡರ ಬೇಜವಾಬ್ದಾರಿಯ ಅತಿರೇಕವನ್ನಿದು ತೋರ್ಪಡಿಸುತ್ತಿದೆ. ರಾಷ್ಟ್ರೀಯ ಸಮಸ್ಯೆಗಳನ್ನು ಪರಿಹರಿಸಲು ವಿಫಲವಾಗಿರುವುದನ್ನು ಕಂಡ ದೇಶದ ಜನತೆ 1977 ರಲ್ಲಿ ಆ ಪಕ್ಷವನ್ನು ಸೋಲಿಸಿತ್ತು. ಮೂರು ವರ್ಷ ಅಧಿಕಾರ ಕಳೆದುಕೊಂಡ ಈ ರಾಜಕೀಯ ಪಕ್ಷದ ಸರ್ವಾಧಿಕಾರಿಯು ತಲೆಯಲ್ಲಿ ಒಳ್ಳೆ ವಿಚಾರ ಮಾಡಿಬಂದಿರಬೇಕೆಂದು ತಿಳಿದು ಜನತೆ ಆಕೆಯ ಪಕ್ಷವನ್ನು ಅಧಿಕಾರದ ಗದ್ದುಗೆಗೇರಿಸಿತು. ಆ ರೀತಿ ಮಾಡಿದ್ದು ತಪ್ಪೆಂದು ಈಗ ತಿಳಿಯುತ್ತಿದೆ. ಈ ಹಿಂದೆ ಅಧಿಕಾರದಲ್ಲಿದ್ದಾಗ ಯಾರು ಏನು ಮಾಡಿದರೆಂಬ ಪ್ರಶ್ನೆ ಈಗ ಬೇಡ, ಈಗಿನ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳು ಸದ್ಯ ಏನು ಮಾಡುತ್ತಿವೆಂಬುದನ್ನು ನೋಡೋಣ.

ನಾವು ಸ್ವತಂತ್ರರಾಗಿರುವ ಕಳೆದ ಮೂರುವರೆ ದಶಕಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ರೀತಿಯಲ್ಲಿ ನಮ್ಮ ದೇಶದ ನಿಷ್ಠೆ ಮತ್ತು ಐಕ್ಯತೆಯು ಗಂಡಾಂತರದಲ್ಲಿದೆ ಎಂದು "ಮೇ 28 ರಂದು ವಿಜಯವಾಡದಲ್ಲಿ ಸಮಾವೇಶಗೊಂಡ 14 ವಿರೋಧ ಪಕ್ಷಗಳ ಸಭೆ ಅಭಿಪ್ರಾಯ ವ್ಯಕ್ತ ಮಾಡಿದೆ. ಜನತೆ ಮತ್ತು ಪ್ರದೇಶಗಳು ಎದುರಿಸುತ್ತಿರುವ ಕೆಲವು ಅತ್ಯಾವಶ್ಯಕ ಸಮಸ್ಯೆಗಳಿಗೆ ಸಕಾಲದಲ್ಲಿ ಪರಿಹಾರ ಕಂಡು ಹಿಡಿಯುವಲ್ಲಿ ಕೇಂದ್ರದಲ್ಲಿ ಅಧಿಕಾರ ಚಲಾಯಿಸುತ್ತಿರುವ ಆಳುವ ಪಕ್ಷ ವಿಫಲವಾಗಿರುವುದರಿಂದಲೇ ರಾಷ್ಟ್ರದ ಐಕ್ಯತೆ ಹಾಗೂ ನಿಷ್ಠೆಗೆ ಅಪಾಯ ಉದ್ಭವಿಸಿದೆಯೆಂದು ಹೇಳಿದೆ. ಪ್ರಧಾನ ಮಂತ್ರಿಯವರನ್ನೊಳಗೊಂಡು ಆಳುವ ಪಕ್ಷಗದಲ್ಲಿಯ ಸದಸ್ಯರ ಹೇಳಿಕೆಗಳು, ಜಾತೀಯ, ಮತೀಯ ಶಕ್ತಿಗಳು, ಛಿದ್ರಕಾರಿಗಳಿಂದಾಗಿ ರಾಷ್ಟ್ರದ ಏಕತೆಗೆ ಅಪಾಯ ಉಂಟಾಗಿದೆಯೆಂಬ ಅಭಿಪ್ರಾಯವನ್ನು ಆ ಸಭೆ ವ್ಯಕ್ತಮಾಡಿದೆ.

"ಇಂದಿನ ಪರಿಸ್ಥಿತಿಗೆ ವಿರೋಧ ಪಕ್ಷಗಳ ಅಸ್ತಿತ್ವವೇ ಕಾರಣ ಎಂದು ಪ್ರಧಾನ ಮಂತ್ರಿಯವರು ಆರೋಪ ಹೊರಿಸುತ್ತಿರುವುದು ಅತ್ಯಂತ ಬೇಜವಾಬ್ದಾರಿಯದಾಗಿದೆ" ಎಂದು 14 ಪಕ್ಷಗಳ ಪ್ರಕಟಣೆಯಲ್ಲಿ ಹೇಳಿದೆ.

ವಿಜಯವಾಡದಲ್ಲಾದ ಸಭೆಯ ನಿರ್ಣಯಕ್ಕೆ ಸಹಿಮಾಡಿದವರೆಲ್ಲ ಪ್ರಧಾನ ಮಂತ್ರಿಯವರ ಪಕ್ಷದಷ್ಟೇ ಜನಾಭಿಪ್ರಾಯ ಪಡೆದ ರಾಜಕೀಯ ಪಕ್ಷಗಳಾಗಿವೆ. ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕಾದರೆ ಭಾರತದ ಪ್ರಧಾನ ಮಂತ್ರಿಯವರು ಟೀಕೆಗಳನ್ನು ಹಾರ್ದಿಕವಾಗಿ ಸ್ವಾಗತಿಸಿ ವಿರೋಧ ಪಕ್ಷದ ಮುಖಂಡರೊಡನೆ ಚರ್ಚೆಮಾಡಿ ಯಾವ ಪ್ರಶ್ನೆಗಳ ಕುರಿತು ಒಮ್ಮತಕ್ಕೆ ಬರಲು ಸಾಧ್ಯವಾಗಿದೆಯೆಂಬುದನ್ನು ತಿಳಿದುಕೊಳ್ಳುವುದೊಂದೇ ಯೋಗ್ಯಮಾರ್ಗವಾಗಿದೆ.

ಆದರೆ ಇಂದಿರಾ ಗಾಂಧಿ ಈ ರೀತಿಯಲ್ಲಿ ವರ್ತಿಸುತ್ತಿಲ್ಲ. ಲೋಕಸಭೆಯಲ್ಲಿ ಹಲವಾರು ರಾಜ್ಯಗಳಲ್ಲೂ ಬಹುಮತ ಪಡೆದಿರುವುದರಿಂದ, ಆಳುವ ಪಕ್ಷದಷ್ಟೇ, ಎಲ್ಲ ವಿರೋಧ ಪಕ್ಷಗಳು ಒಟ್ಟಿಗೆ ಜನರನ್ನು ಪ್ರತಿನಿಧೀಕರಿಸುತ್ತಿದ್ದರೂ ಕೂಡ, ವಿರೋಧ ಪಕ್ಷಗಳ ಮೇಲೆ ಅವರು ಅಂಬಾರಿ ನಡೆಸುತ್ತಿದ್ದಾರೆ. ಆಳುವ ಪಕ್ಷದ ಈ ವರ್ತನೆಯೇ ದೇಶವನ್ನು ಗಂಡಾಂತರಕ್ಕೀಡುಮಾಡುತ್ತಿದೆ.

ಪಂಜಾಬ್ ಪ್ರಶ್ನೆಯನ್ನೆತ್ತಿಕೊಳ್ಳೋಣ. ಈ ಸಮಸ್ಯೆಯ ಕುರಿತು ಮುಖ್ಯವಾಗಿ ಸಿ. ಪಿ. ಐ. (ಎಂ.) ಮತ್ತು ಎಲ್ಲ ವಿರೋಧ ಪಕ್ಷಗಳು, ಪರಿಹಾರ ಕಂಡುಹಿಡಿಯಲು ಸರಕಾರದ ಜೊತೆಯಲ್ಲಿ ಸಹಕರಿಸಲು ತಯಾರಿದ್ದೇವೆಂಬ ಸೂಚನೆ ಮಾಡಿದ್ದರು. ಹಲವಾರು ಒಪ್ಪಿಗೆಯಾಗುವ ಸೂಚನೆಗಳನ್ನು ತಯಾರಿಸಲಾಗಿತ್ತು. ಪ್ರಧಾನಮಂತ್ರಿಯವರ ನಿಕಟವರ್ತಿಗಳು ಆ ಸೂಚನೆಗಳನ್ನು ಒಪ್ಪಿಕೊಳ್ಳಲಾಗಿದೆ. ಆದರೆ ಅದನ್ನು ಜಾರಿಯಲ್ಲಿ ತರುವ ರೀತಿಯನ್ನಷ್ಟೇ ನಿರ್ಧರಿಸಬೇಕಾಗಿರುವುದೆಂದೂ ಹೇಳಿದ್ದರು.

ಆದ್ದರಿಂದ. ಕೊಟ್ಟ ಆಶ್ವಾಸನೆಯನ್ನು ಅಲ್ಲಗಳೆದವರು ವಿರೋಧ ಪಕ್ಷದವರಲ್ಲೆಂದು ಇದರಿಂದ ಸ್ಪಷ್ಟವಾಗುತ್ತದೆ. ಅನಾಯಾಸವಾಗಿ ಸಕಾಲದಲ್ಲೇ ಪಂಜಾಬ್ ಸಮಸ್ಯೆಯನ್ನು ಬಗೆಹರಿಸಲು ನಿರಾಕರಿಸುತ್ತಿರುವ ಈ ಬೇಜವಾಬ್ದಾರಿ ವ್ಯಕ್ತಿಗಳು ಯಾರು ? ಹಾಗಿರುವಾಗ "ಪಂಜಾಬ್ ಸಮಸ್ಯೆಯನ್ನು ಬಗೆಹರಿಸಲಾಗನಂತೆ ಮಾಡುತ್ತಿರುವವರೆಂದು" ವಿರೋಧ ಪಕ್ಷಗಳ ಮೇಲೆ ಆರೋಪ ಹೊರಿಸಿ ಅಪಮಾನಗೊಳಿಸುವುದಾದರೂ ಯಾಕೆ ?

ಹಲವಾರು ತಿಂಗಳ ಹಿಂದೆಯೇ ಸರಕಾರ ಅಕಾಲಿಗಳ ಧಾರ್ಮಿಕ ಬೇಡಿಕೆಗಳನ್ನು ಒಪ್ಪಿಕೊಂಡಿತ್ತು. ಚಂದೀಗಡ, ಪಂಜಾಬ್–ಹರಿಯಾಣ ಗಡಿ ಹಳ್ಳಿಗಳು, ಮತ್ತು ನದಿಗಳ ನೀರಿನ ಹಂಚಿಕೆ ಕುರಿತು ಒಪ್ಪಿಗೆಯಾಗುವ ಕರಾರುಗಳನ್ನು ನಿರ್ಣಯಿಸಲಾಗಿತ್ತು. ಕೆಲವೇ ದಿವಸದೊಳಗೆ ಸಮಸ್ಯೆ ಪರಿಹರಿಸಲಾಗುವುದೆಂದು ವಿರೋಧ ಪಕ್ಷಗಳಿಗೆ ಸರಕಾರಿ ವಕ್ತಾರರು ಹೇಳುತ್ತಲೇ ಬಂದಿದ್ದರು. "ಪಂಜಾಬ್ ಸಮಸ್ಯೆಗಳ ಪರಿಹಾರಕ್ಕೆ ವಿರೋಧ ಪಕ್ಷಗಳು ಆತಂಕ ಒಡ್ಡುತ್ತಿವೆಂದು" ಈಗ ಪ್ರಧಾನ ಮಂತ್ರಿಯವರು ವಿರೋಧ ಪಕ್ಷಗಳ ಮೇಲೆ ಆರೋಪ ಹೊರಿಸುತ್ತಿರುವುದು, ಕಷ್ಟಕರವಾದ ಸಮಸ್ಯೆಗಳಿಗೆ ರಾಷ್ಟ್ರೀಯ ನಿಲುವಿಗೆ ಹಾಗೂ ನಿಷ್ಠಾವಂತ ರಾಜಕಾರಣಕ್ಕೆ ವಿರೋಧವಾಗಿದೆ.

ವಿಜಯವಾಡ, ದಿಲ್ಲಿಗಳಲ್ಲಿ ಸಮಾವೇಶಗೊಂಡ ವಿರೋಧ ಪಕ್ಷಗಳ ಸಮಾವೇಶ ತನ್ನನ್ನು ಅಧಿಕಾರದಿಂದ ಕೆಳಗಿಳಿಸುವ ಉದ್ದೇಶದಿಂದ ಕೂಡಿಯೆಂದು ಪ್ರಧಾನ ಮಂತ್ರಿಯವರು ತಿಳಿದುಕೊಂಡಂತೆ ಕಂಡು ಬರುತ್ತದೆ. ತನ್ನ ಪ್ರಭಾವ ಇಳಿಮುಖವಾಗುವುದೆಂದು ತಿಳಿದುಕೊಂಡ ಒಬ್ಬ ಆಳುವವನ ಪರಿಸ್ಥಿತಿ ಇಂದಿರಾಗಾಂಧಿಯವರದ್ದಾಗಿದೆ. ಆ ಕಾರಣದಿಂದಲೇ ವಿರೋಧ ಪಕ್ಷಗಳ ಪ್ರತಿಯೊಂದು ಹೆಜ್ಜೆಯ ಕುರಿತೂ ಸಂಶಯ ವ್ಯಕ್ತ ಮಾಡುತ್ತಿದ್ದಾರೆ. ಮುಂಬರುವ ಚುನಾವಣೆಗಿಂತಲೂ ಹೆಚ್ಚಾಗಿ, ಪಂಜಾಬ್‌ದಂಥ ರಾಷ್ಟ್ರೀಯ ಸಮಸ್ಯೆಗಳ ಕುರಿತು ಹೆಚ್ಚು ಕಾಳಜಿ ಉಳ್ಳವರು ಎಷ್ಟೋ ಜನರಿದ್ದಾರೆಂಬುದನ್ನು ಇಂದಿರಾಗಾಂಧಿ ತಿಳಿದುಕೊಳ್ಳಲಿ. ಪ್ರಜಾ ಪ್ರಭುತ್ವ ಪದ್ಧತಿ ಭಾರತ ದೇಶದಲ್ಲಿ ಇನ್ನೂ ಮುಂದುವರಿಯುತ್ತಿರುವಾಗ, ಆಳುವ ಪಕ್ಷವನ್ನು ಸೋಲಿಸುವುದೇನೂ ವಿರೋಧ ಪಕ್ಷಗಳು ಮಾಡುವ "ಪಾಪ"ವಲ್ಲ ಎಂಬುದನ್ನೂ ಅವರು ಅರಿತುಕೊಳ್ಳಲಿ. 1977 ಮತ್ತು 1980 ಪಾಠ ಇದಾಗಿದೆ. ಮುಂದಿನ ಚುನಾವಣೆಯಲ್ಲಿ ಇದು ಪುನರಾವರ್ತನೆಯಾಗದಿರಲಿ.

ಪಂಜಾಬಿನ ತೀವ್ರವಾದಿಗಳಾದ ಭಿಂದ್ರನ್‌ವಾಲೆಯವರನ್ನೊಳಗೊಂಡು ಎಲ್ಲಾ ಪ್ರತ್ಯೇಕವಾದಿಗಳ ಕುರಿತೂ ವಿಜಯವಾಡ, ದಿಲ್ಲಿ ಸಮಾವೇಶಗಳು ಎಚ್ಚರಿಸಿವೆ. ಹಲವಾರು ಸಲ ಚರ್ಚೆ ಮಾಡಿ ಒಪ್ಪಿಗೆಯಾದಂಥ ಸೂಚನೆಗಳನ್ನು ಕಾರ್ಯರೂಪದಲ್ಲಿ ತರಲು ಕೇಂದ್ರ ಸರಕಾರ ಧೈರ್ಯ ತೋರಿಸಿದ್ದಾದರೆ ತಾವು ತೀವ್ರವಾದಿಗಳ ವಿರುದ್ಧ ಹೋರಾಡಿ ಅವರನ್ನು ಪ್ರತ್ಯೇಕಿಸುವುದಾಗಿ ಅಕಾಲಿ ಮುಖಂಡರು ಹೇಳಿದ್ದಾರೆ. ವಿರೋಧ ಪಕ್ಷಗಳೆಲ್ಲ ತೀವ್ರವಾದಿಗಳಿಂದ ದೂರ ಉಳಿದಿದ್ದಾರೆ.

ಪಂಜಾಬಿನ ಸಮಸ್ಯೆಗೆ ಪರಿಹಾರವನ್ನು ಕೂಡಲೇ ಒದಗಿಸದಿದ್ದರೆ, ಗಂಡಾಂತರಕಾರಿ ಪರಿಸ್ಥಿತಿ ಉಂಟಾದೀತೆಂಬ ವಿಚಾರದ ಕುರಿತು ಕೇಂದ್ರ ಮತ್ತು ಪಂಜಾಬಿನ ಆಳುವ ಪಕ್ಷದವರಿಗೆ ಚಿಂತೆ ಇಲ್ಲದಿರುವುದರಿಂದಲೇ ಪರಿಹಾರದ ಸೂಚನೆಗಳನ್ನು ಹಾಳುಕೆಡವಲಾಗುತ್ತಿದೆಯೆಂಬ ಸಂಶಯ ಉಂಟಾಗುತ್ತಿದೆ. ಸಿಕ್ಕರ ಒಂದು ಗುಂಪಿನೊಡನೆ ಸೇರಿ, ಪಂಜಾಬಿನಲ್ಲಿ ತನ್ನ ಅಧಿಕಾರ ಉಳಿಸಿಕೊಳ್ಳುವ ದುರುದ್ದೇಶದಿಂದ ತೀವ್ರವಾದಿಗಳಿಗೆ ಕಾಂಗ್ರೆನವರು ಪ್ರೋತ್ಸಾಹ ಕೊಡುತ್ತಿದ್ದಾರೆಯೋ ಎಂಬ ಸಂಶಯ ಬರುತ್ತಿದೆ.

ವಿರೋಧ ಪಕ್ಷವನ್ನು ಇಂದಿರಾ ಗಾಂಧಿಯವರು ಹಳಿಯುತ್ತಿರುವುದನ್ನು ನೋಡುವಾಗ, ಕಾಂಗ್ರೆಸ್ಸೇತರ ಎಲ್ಲ ವಿರೋಧ ಪಕ್ಷಗಳನ್ನೆದುರಿಸುವ ತಯಾರಿಯಲ್ಲಿದ್ದಾರೆಂದು ಕಂಡುಬರುತ್ತದೆ.

ಪರಿಸರ

* ಕಾಂಗ್ರೆಸ್ (ಐ) ಪಕ್ಷ ಎಲ್ಲೆಲ್ಲಿ ಭಾರೀ ಪ್ರಮಾಣದಲ್ಲಿ ಹಣ ಖರ್ಚು ಮಾಡಿತೋ ಅಲ್ಲೆಲ್ಲಾ ಪರಾಜಯವನ್ನು ಅನುಭವಿಸಿತು. ಎಲ್ಲೆಲ್ಲಿ ಕಡಿಮೆ ಖರ್ಚು ಮಾಡಿ ಹೆಚ್ಚು ಮುತುವರ್ಜಿಯಿಂದ ಕೆಲಸ ಮಾಡಿತೋ ಆ ಕ್ಷೇತ್ರಗಳಲ್ಲೆಲ್ಲಾ ಜಯಗಳಿಸಿತು.

–ರಾಜೀವ್ ಗಾಂಧಿ

(ಕಾಂಗ್ರೆ ಪ್ರಧಾನ ಕಾರ್ಯದರ್ಶಿ)

* 1984-85ರಲ್ಲಿ ಕೊನೆಗೊಳ್ಳುವ ಆರನೆಯ ಯೋಜನೆಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಗೆ ನಿಗದಿಸಿದ ಗುರಿಯಾದ 154 ಮಿಲಿಯ ಟನ್ನುಗಳಿಗೆ, ಸುಮಾರು 6 ಮಿಲಿಯ ಟನ್ನುಗಳಷ್ಟು ಕಡಿಮೆ ಬೀಳಬಹುದೆಂದು ಯೋಜನಾ ಆಯೋಗ ಅಂದಾಜು ಮಾಡಿದೆ. ಗೋಧಿ ಬಿಟ್ಟು ಉಳಿದೆಲ್ಲದರ ಉತ್ಪಾದನಾ ಗುರಿ ತಲುಪುವ ಸಾಧ್ಯತೆಗಳಿಲ್ಲ.

–ಯು. ಎನ್. ಐ.

* 1953 ರಿಂದ 1981 ರವರೆಗೆ, ನೆರೆ ಹಾವಳಿಯಿಂದಾಗಿ ದೇಶ ಸರಾಸರಿ 365 ಕೋಟಿಗಳಷ್ಟು ಹಾನಿ ವರ್ಷಂಪ್ರತಿ ಅನುಭವಿಸುತ್ತಿದೆ. 1981-82 ರಲ್ಲಿ ನೆರೆ ಹಾವಳಿಯ ಹಾನಿ 1132 ಕೋಟಿ. ಆದರೆ ಆರನೇ ಯೋಜನೆಯಲ್ಲಿ ನೆರೆ ನಿಯಂತ್ರಣ ಕ್ರಮಗಳಿಗೆ ನಿಗದಿಪಡಿಸಿದ 1,045 ಕೋಟಿ ರೂ. ಗಳಲ್ಲಿ ರೂ. 322 ಕೋಟಿ ಮಾತ್ರ ಖರ್ಚು ಮಾಡಲಾಗಿದೆ. ಇದು ನೆರೆ ನಿಯಂತ್ರಣದ ಬಗ್ಗೆ ನಮ್ಮ ಕಾಳಜಿಯನ್ನು ತೋರಿಸುತ್ತದೆ.

–ಅಮೃತ್ ಪ್ರಭಾತ್
ಅಲಹಾಬಾದ್

* ಬ್ರಿಟಿಷರಿಗೆ ಚಕ್ರಾಧಿಪತ್ಯ ಹೇಗೋ ಸ್ವೀಡನ್ನಿಗೆ ಸೋಷಲಿಜಂ ಹಾಗೆ. ಅದು ಅದೃಶ್ಯವಾದ ಬಹು ಕಾಲಾನಂತರವೂ ಜನ ಮಾತ್ರ ಅದು ಇನ್ನೂ ಇದೆ ಎಂದೇ ನಂಬಿಕೊಂಡಿರುವಂತೆ

–ಕಾರ್ಲ್ ಬಿಲ್ಟ್
(ಸ್ವೀಡನ್ನಿನ ವಿರೋಧಪಕ್ಷದ ನಾಯಕ)

ಅಂಬಲಗಾ

ಪೋಲೀಸ್ ದೌರ್ಜನ್ಯಕ್ಕೆ ಖಂಡನೆ

ಕರ್ನಾಟಕ ಪ್ರಾಂತ ರೈತ ಸಂಘದ ಗುಲ್ಬರ್ಗಾ ಜಿಲ್ಲೆಯ ಅಂಬಲಗಾ ಘಟಕದ ಸಕ್ರಿಯ ಕಾರ್ಯಕರ್ತರಾದ ಶ್ರೀ ಕಲ್ಲಪ್ಪ ಗುತ್ತಿಯವರನ್ನು ಯಾವುದೇ ಮುನ್ಸೂಚನೆ ನೀಡದೆ ದಿನಾಂಕ 29–6–83ರಂದು ಬೆಳಿಗ್ಗೆ 1–30 ಗಂಟೆಗೆ ಪಿ.ಎಸ್.ಐ. ಯಲ್ಲಪ್ಪ ಅವರು ಬಲತ್ಕಾರಕವಾಗಿ ಎಳೆದೊಯ್ದು ನರೋಣಾ ಪೋಲಿಸ್ ಠಾಣೆಯಲ್ಲಿ ಅವಾಚ್ಯವಾಗಿ ಬೈಯುತ್ತ ಬಾಸುಂಡೆ ಏಳುವಂತೆ ಮನ ಬಂದಂತೆ ಥಳಿಸಿದ್ದಾರೆ. ಇದರಿಂದ ಅಂಬಲಗಾ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಭಯದ ವಾತಾವರಣ ಮೂಡಿದೆ.

ಈ ಪೋಲೀಸ್ ದೌರ್ಜನ್ಯವನ್ನು ಅಂಬಲಗಾ ಗ್ರಾಮ ಪಂಚಾಯಿತಿ ಚೇರಮನ್ ಚಂದ್ರಶೇಖರ ಶೆಳಕಿಯವರು ಉಗ್ರವಾಗಿ ಖಂಡಿಸಿದ್ದಾರೆ.

ಇಂಥ ಬೇಜಾವಾಬ್ದಾರಿ ಪೋಲಿಸ್ ಅಧಿಕಾರಿಗಳ ವರ್ತನೆಯನ್ನು ಮತ್ತು ಜನವಿರೋಧಿ ಪೋಲಿಸ್ ದೌರ್ಜನ್ಯವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಗುಲಬರ್ಗಾ ಜಿಲ್ಲಾ ಘಟಕವು ಉಗ್ರವಾಗಿ ಖಂಡಿಸುತ್ತದೆ. ಈ ಬಗ್ಗೆ ಮೇಲಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಸಂಘವು ಹೋರಾಟದ ಹಾದಿಯನ್ನು ಹಿಡಿಯಬೇಕಾಗುತ್ತದೆ ಎಂದು ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಕಲ್ಲಪ್ಪ ಕಿರಣಗಿಯವರು ತಿಳಿಸಿದ್ದಾರೆ.

ಜಮ್ಮು - ಕಾಶ್ಮೀರ ಚುನಾವಣೆ

ಜೂನ್ 5ರಂದು ಕಾಶ್ಮೀರದಲ್ಲಿ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ನ್ಯಾಷನಲ್ ಕಾನ್‌ಫೆರೆನ್ಸ್ ಪಕ್ಷಕ್ಕೆ ಬಹುಮತದಿಂದ ಆರಿಸಿ ಬಂದು ಡಾ॥ ಫರೂಕಿಯವರು ಸರಕಾರ ಸ್ಥಾಪನೆ ಮಾಡುವಂತಾಗಿದೆ. ಇಂದಿರಾ ಕಾಂಗ್ರೆಸ್ ಎರಡನೇ ಪಕ್ಷವಾಗಿ ಆರಿಸಿ ಬಂದಿದೆ. ಪಾಂಥರ್ಸ್ ಪಕ್ಷಕ್ಕೆ ಒಂದು ಸ್ಥಾನ ದೊರೆತಿದೆ. ತನ್ನ ಬಲಿಷ್ಟ ಕೇಂದ್ರವೆಂದು ಜಂಭ ಕೊಚ್ಚಿಕೊಳ್ಳುತ್ತಿದ್ದ ಬಿ. ಜೆ. ಪಿ. ಚುನಾವಣೆಯಲ್ಲಿ ಸಂಪೂರ್ಣ ಸೋತಿದೆ.

ಜನತಾ ಪಕ್ಷದಿಂದ ಇಂದಿರಾ ಕಾಂಗ್ರೆಸ್ ಸೋತುಹೋಗಿದ್ದಾಗ, ಮತ್ತು ಶೇಖ ಅಬ್ದುಲ್ಲಾರಂಥ ಪ್ರಮುಖ ವ್ಯಕ್ತಿ ರಾಷ್ಟ್ರೀಯ ಕಾನ್‌ಫರೆನ್ಸಿನ ಮುಖಂಡರಾಗಿದ್ದಾಗ 1977ರಲ್ಲಿ ಕಾಶ್ಮೀರದಲ್ಲಿ ಚುನಾವಣೆ ನಡೆದಿತ್ತು, ಆಗ ಪರಿಸ್ಥಿತಿಯೇ ಬೇರೆಯಾಗಿತ್ತು. ಆಗ ನ್ಯಾಶನಲ್ ಕಾನ್‌ಫೆರೆನ್ಸಿಗೆ 47, ಜನತಾ ಪಕ್ಷಕ್ಕೆ 13, ಕಾಂಗೈಗೆ 11, ಜಮಾಯತ್ ಇಸ್ಲಾಂಗೆ 1 ಸ್ಥಾನ ದೊರೆತಿತ್ತು. ಬಂಡುಗಾರ ಜನಸಂಘ 4 ಸ್ಥಾನ ಪಡೆದಿತ್ತು. ಆಗಿನ ಚುನಾವಣೆಯಲ್ಲಿ ನ್ಯಾಶನಲ್ ಕಾನ್‌ಫರೆನ್ಸಿಗೆ ಜಮ್ಮು ಪ್ರದೇಶದಲ್ಲಿ ಹೆಚ್ಚಿಗೆ ಸ್ಥಾನ, ಕಾಂಗೈಗೆ ಕಾಶ್ಮೀರ ಕೊಳ್ಳದಲ್ಲಿ ಜಾಸ್ತಿ ಸ್ಥಾನ ಪಡೆಯಲು ಸಾಧ್ಯವಾಗಿತ್ತು. ಜನಸಂಘ ಮುಖ್ಯ ಘಟಕವಾಗಿದ್ದ ಆಗಿನ ಜನತಾ ಪಾರ್ಟಿಗೆ ಜಮ್ಮು ಪ್ರದೇಶದಲ್ಲಿ ಸ್ಥಾನ ದೊರೆತಿತ್ತು.

ಈಗ ಬೇರೆ ರೀತಿಯ ಬದಲಾವಣೆ ಕಾಣುತ್ತಿದ್ದೇವೆ. ಕಾಶ್ಮೀರ ಕೊಳ್ಳದಲ್ಲಿ ನ್ಯಾಶನಲ್ ಕಾನ್‌ಫೆರೆನ್ಸ್ ತನ್ನ ಪ್ರಭಾವ ಉಳಿಸಿಕೊಂಡಿದೆ, ಕಾಂಗೈ ಜಮ್ಮು ಪ್ರದೇಶದಲ್ಲಿ ಹೆಚ್ಚು ಮತ ಪಡೆದಿದೆ. ಈ ರೀತಿಯ ಮತಗಳ ಹಂಚಿಕೆ ಜಮ್ಮು-ಕಾಶ್ಮೀರದ ರಾಜಕೀಯಕ್ಕಷ್ಟೇ ಅಲ್ಲ ಇಡೀ ದೇಶದ ಮೇಲೂ ಗಂಭೀರ ಪರಿಣಾಮ ಬೀರಬಹುದಾಗಿದೆ.

ಕಾಂಗೈ ಮತ್ತು ನ್ಯಾಶನಲ್ ಕಾನ್‌ಫೆರೆನ್ಸಿನವರ ಕಾರ್ಯಕ್ರಮ ನೋಡಿ ಜನರು ಮತ ನೀಡಿದ್ದಾರೆಯೇ? ಆ ರೀತಿ ಆಗಿದ್ದರೆ ನಕಾಶೆಯೇ ಬೇರೆಯಾಗುತ್ತಿತ್ತು. ಕಾರ್ಯಕ್ರಮ ನೋಡಿ ಮತ ನೀಡಿದ್ದರೆ ಒಂದೇ ರಾಜ್ಯದ 2 ಪ್ರದೇಶಗಳಲ್ಲಿ ಈ ರೀತಿಯ ಪ್ರತ್ಯೇಕತೆ ಕಂಡು ಬರುತ್ತಿರಲಿಲ್ಲ.

ಜಮ್ಮು-ಕಾಶ್ಮೀರ ರಾಜ್ಯದಲ್ಲಿ ಆಳುವ ಗುತ್ತಿಗೆಯನ್ನು ಫರೂಕ್ ಅಬ್ದುಲ್ಲಾ ಅವರ ಮುಖಂಡತ್ವದ ನ್ಯಾಶನಲ್ ಕಾನ್‌ಫೆರೆನ್ಸಿಗೆ ಕೊಡುತ್ತಿದ್ದಾರೆ. ರಾಷ್ಟ್ರಮಟ್ಟದಲ್ಲಿ ಇಂದಿರಾ ಕಾಂಗ್ರೆಸ್ಸಿಗೆ ಬೆಂಬಲ ಕೊಡಲು ಅದರ ಜೊತೆಯಲ್ಲಿ ಒಪ್ಪಂದಕ್ಕೆ ಬರಲು ಅವರು ತಯಾರಿದ್ದರು. ಆದರೆ ಕಾಶ್ಮೀರದಲ್ಲಿ ತನ್ನ ಅಂಗಡಿಯನ್ನು ಪೂರ್ಣ ಮುಚ್ಚಲು ಕಾಂಗೈಗೆ ಕಷ್ಟಕರವಾಗುತ್ತಿತ್ತು. ಇದನ್ನು ತಿಳಿದ ನ್ಯಾಶನಲ್ ಕಾನ್‌ಫೆರೆನ್ಸ್ ಪುನರ್ವಸತಿಯ ಕಾಯಿದೆಯ ಪೂರ್ಣ ಉಪಯೋಗ ಮಾಡಿಕೊಂಡು, ಜನಮತಗಣನೆಯನ್ನು ಪ್ರತಿಪಾದಿಸುವ ಮೀರವೈಸ್ ಜೊತೆಯಲ್ಲಿ ಅವರ ಬೆಂಬಲ ಪಡೆಯಲು ಒಪ್ಪಂದ ಮಾಡಿಕೊಂಡರು ಭಾರತದೊಡನೆ ಜಮ್ಮು ಕಾಶ್ಮೀರದ ಸೇರ್ಪಡೆ ಕೊನೆಯದೆಂದೂ, ದೇಶದ ಐಕ್ಯತೆಯೇ ತನ್ನ ಗುರಿಯೆಂದೂ ಫರೂಕ್ ಅಬ್ದುಲ್ಲಾ ಅವರು ಸ್ಪಷ್ಟವಾಗಿ ಹೇಳಿದ್ದರೂ ಕೂಡ ಚುನಾವಣೆಯ ಸಮಯದಲ್ಲಿ ಅವರ ಧೋರಣೆ ಬೇರೆಯೇ ಆಗಿತ್ತು. ದಿ. ಶೇಕ್ ಅಬ್ದುಲ್ಲಾ ಅವರ ಪ್ರತಿಭೆಯನ್ನು ಇವರು ಉಪಯೋಗ ಮಾಡಿಕೊಂಡರು.

ಕಾಂಗ್ರೆಸ್ಸಿನ ಮಟ್ಟಿಗೆ ಹೇಳಬೇಕಾದರೆ ಅದು ಜಮ್ಮು ಕಾಶ್ಮೀರದಲ್ಲಿ ಬರಿ ಅಧಿಕಾರ ಪಡೆಯುವ ಉದ್ದೇಶವನ್ನಷ್ಟೇ ಇಟ್ಟುಕೊಂಡಿತ್ತು. ಅದು ನ್ಯಾಶನಲ್ ಕಾನ್‌ಫೆರೆನ್ಸ್‌ನ ಜೊತೆಯಲ್ಲಿ ಒಪ್ಪಂದಕ್ಕೆ ಬರಲು ಪ್ರಯತ್ನ ಮಾಡಿ ಅದು ವಿಫಲಗೊಂಡಾಗ ಅದು ಯಾವುದೇ ಸಿದ್ಧಾಂತದ ತಳಹದಿಯಲಿಲ್ಲ. ಬರೇ ವ್ಯಕ್ತಿಗಳ ತಿಕ್ಕಾಟದಿಂದ ಸಂದರ್ಭಸಾಧಕ ಘೋಷಣೆಗಳನ್ನು ಕೂಗುತ್ತ ಅಧಿಕಾರಕ್ಕೆ ಬರುವ ದುರುದ್ದೇಶದಿಂದ ಬೇಕಾದ ಚಟುವಟಿಕೆಗಳಲ್ಲಿ ತೊಡಗಿತು. ಕಾಶ್ಮೀರವನ್ನು ಜಾತೀಯ ಪ್ರಚಾರದಲ್ಲಿ ಮುಳುಗಿಸುತ್ತಿರುವ ಜಮಾಯತ್ ಇಸ್ಲಾಮಿನ ವಿರುದ್ಧ ತನ್ನ ಚುನಾವಣಾ ಪ್ರಚಾರದಲ್ಲಿ ಒಂದು ಚಕಾರ ಶಬ್ದವನ್ನು ಎತ್ತಲಿಲ್ಲ. ಬಿ.ಜೆ.ಪಿ.ಯ ಪ್ರಭಾವವುಳ್ಳ ಜಮ್ಮುವಿನಲ್ಲಿ, ಅಲ್ಲಿಯ ಜನರ ರಕ್ಷಣೆಯ ಹಕ್ಕಿನ ಘೋಷಣೆ ಮಾಡಿ, ಮತದಾರರನ್ನು ತನ್ನೆಡೆ ಸೆಳೆಯಿತು. ತಾನು ಕೇಂದ್ರ ಮತ್ತು ಜಮ್ಮು ಕಾಶ್ಮೀರದಲ್ಲಿ ಅಧಿಕಾರದಲ್ಲಿದ್ದಾಗ 1947ರಿಂದಲೂ ಜಮ್ಮು ಪ್ರಾಂತದಲ್ಲಿ ನೆಲೆಸಿರುವ ನಿರಾಶ್ರಿತರ ಸಮಸ್ಯೆಗಳ ಕುರಿತು ಯಾವ ಗಮನವನ್ನು ಹರಿಸದ ಕಾಂಗ್ರೆಸ್ಸು, ಅವರನ್ನು ತಮ್ಮ ನೆಲದಿಂದ ಹೊರಹಾಕಲು ಬಿಡುವುದಿಲ್ಲೆಂದು ಈಗ ಹೇಳಿದೆ. ಜಾತಿ ಮತ್ತು ಧರ್ಮವನ್ನು ನೋಡಿಯೇ ಇಂದಿರಾ ಗಾಂಧಿಯವರು ಉಮೇದುವಾರರನ್ನು ನಿಲ್ಲಿಸಿದ್ದರು. ಮೇ 29ರಂದು ಇಂದಿರಾ ಗಾಂಧಿಯ ಪಂಜಾಬ್ ಪ್ರವಾಸ ಮತ್ತು ಅಕಾಲಿಗಳ ಜೊತೆಯಲ್ಲಿ ಒಪ್ಪಂದಕ್ಕೆ ಬರಲು ಕೇಂದ್ರ ಸರ್ಕಾರದ ನಿರಾಕರಣೆ ಜಮ್ಮುವಿನಲ್ಲಿರುವ ಹಿಂದೂ ಮತದಾರರನ್ನು ಒಲಿಸಿಕೊಳ್ಳುವ ಸಲುವಾಗಿತ್ತು. ಕಾಂಗ್ರೆಸ್ಸಿಗೆ ಇದೇನೂ ಹೊಸದಲ್ಲ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಹೊರಗಿಡುವ ದುರುದ್ದೇಶದಿಂದ ಕೇರಳದಲ್ಲಿ ಅದು ಎಲ್ಲ ಜಾತಿ ಮತಗಳ ಗುಂಪುಗಳೊಡನೆ ಒಪ್ಪಂದ ಮಾಡಿಕೊಂಡಿತ್ತು. ಇದರ ಪ್ರತಿಫಲವಾಗಿ ಮೊದಲಿನಿಂದಲೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬಲಿಷ್ಟವಾಗಿರುವ ಕೇರಳದಲ್ಲಿ ಈಗ ಜಾತೀಯ ಮತ್ತು ಮತೀಯ ಶಕ್ತಿಗಳಿಗೆ ಪ್ರೋತ್ಸಾಹ ನೀಡಿ ಬಲಗೊಳಿಸಲಾಗುತ್ತಿದೆ. ಜನರ ತಿಳುವಳಿಕೆಯನ್ನು ಎಬ್ಬಿಸದಿದ್ದರೆ, ಈಗಿನ ಪರಿಸ್ಥಿತಿಯಲ್ಲಿ ಕಾಶ್ಮೀರದಲ್ಲಿ ಅತಿ ಕೆಟ್ಟ ಪರಿಣಾಮ ಉಂಟಾಗಬಹುದು.

ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಮತ್ತು ಮಹಾರಾಜಾ ಹರಿಸಿಂಗ ಅವರ ವಿರುದ್ಧ ಹೋರಾಟದಲ್ಲಿ ಜಮ್ಮು-ಕಾಶ್ಮೀರ ಒಳ್ಳೆ ಪರಂಪರೆಯನ್ನು ಪಡೆದಿದೆ. ಆ ಕಾಲದಲ್ಲಿ ನ್ಯಾಶನಲ್ ಕಾನ್ಫರೆನ್ಸ್ ಜಮ್ಮು, ಕಾಶ್ಮೀರ ಲಡಾಕಿನ ಜನರನ್ನೆಲ್ಲ ಒಟ್ಟುಗೂಡಿಸುವುದರಲ್ಲಿ ಐಕ್ಯತಾ ಶಕ್ತಿಯಾಗಿ ಬೆಳೆದಿತ್ತು. ಇಂಥ ಒಮ್ಮತದ ಬಂಧನಕ್ಕೆ ಈಗಿನ ಚುನಾವಣೆ ಹೆದರಿಕೆಯನ್ನೊಡ್ಡಿದೆ. ದೇಶದಲ್ಲಿನ ವಿಭಜನಕಾರಿ ಶಕ್ತಿಗಳ ಹಿನ್ನೆಲೆಯಲ್ಲಿ ಸರಿ ವೇಳೆಯಲ್ಲಿ ಅವುಗಳನ್ನು ತಡೆಹಿಡಿಯದಿದ್ದರೆ ಜಮ್ಮು-ಕಾಶ್ಮೀರದ ಚುನಾವಣೆ, ಆ ರಾಜ್ಯಕ್ಕಾಗಿ ಅಷ್ಟೇ ಅಲ್ಲ, ಇಡೀ ದೇಶಕ್ಕೆ ಅಪಾಯಕಾರಿಯಾಗುವುದರಲ್ಲಿ ಸಂಶಯವಿಲ್ಲ. ಜಮ್ಮು ಪ್ರದೇಶದಲ್ಲಿ ಬಿಜೆಪಿಯ ಸ್ಥಾನದಲ್ಲಿ ತಾನು ಜಯಗಳಿಸಿದ್ದೇನೆಂದು ಇಂದಿರಾ ಕಾಂಗ್ರೆಸ್ ಆನಂದ ಪಡುವ ಕಾರಣವಿಲ್ಲ. ಅದೇ ಸಮಯದಲ್ಲಿ ನ್ಯಾಶನಲ್ ಕಾನ್ಫರೆನ್ಸು ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಂಡು ನ್ಯಾಶನಲ್ ಕಾನ್ಫರೆನ್ಸಿನ ಉತ್ತಮ ಪರಂಪರೆಯನ್ನು ಮುಂದಕ್ಕೊಯ್ಯಲು ಕ್ರಮ ತೆಗೆದುಕೊಳ್ಳದೇ 'ಸಂದರ್ಭಸಾಧಕ ಘೋಷಣೆಗಳನ್ನು ಅವಲಂಬಿಸಿದರೆ, ಅದರ ತಳಪಾಯ ಕಿತ್ತೊಗೆಯಲ್ಪಟ್ಟು ಅದು ಐಕ್ಯತೆಯನ್ನು ಉಳಿಸಿಕೊಂಡು ಹೋಗುವ ಶಕ್ತಿಯಾಗಿರಲು ಸಾಧ್ಯವಿಲ್ಲ. ನ್ಯಾಶನಲ್ ಕಾನ್ಫೆರೆನ್ಸ್ ರಾಜ್ಯ ಆಳುತ್ತಿದ್ದಂತೆಯೇ ಕೇಂದ್ರದ ಬೆಂಬಲ ಪಡೆದ ಕಾಂಗ್ರೆಸ್ಸಿನ ವಿರೋಧವನ್ನೆದುರಿಸಬೇಕಾಗುತ್ತದೆ. ಜನತೆಯ ಸಂಕಷ್ಟಗಳ ನಿವಾರಣೆಗೆ ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ, ತನಗೆ ಮತ ನೀಡದ ಪ್ರದೇಶಗಳಿಗೆ ಗಮನ ಕೊಡದಿದ್ದರೆ ಮತ್ತು ಸಾಮೂಹಿಕ ಸಂಘಟನೆಗಳು ಹಾಗೆಯೇ ವಿವಿಧ ಪಕ್ಷಗಳು ಪ್ರಜಾಪ್ರಭುತ್ವ ರೀತಿಯಲ್ಲಿ ಕೆಲಸ ಮಾಡಲು ಅವಕಾಶ ಮಾಡಿ ಕೊಡದಿದ್ದರೆ, ದೇಶದ ಪ್ರಜಾಪ್ರಭುತ್ವ ಚಳುವಳಿಯನ್ನು ಅವಲಂಬಿಸದಿದ್ದರೆ, ಕಾಂಗ್ರೆಸ್ಸಿನ ಆಕ್ರಮಣವನ್ನೆದುರಿಸಲು ನ್ಯಾಷನಲ್ ಕಾನ್ಫರೆನ್ಸಿಗೆ ಬಹಳ ಕಷ್ಟಕರವಾಗುವುದರಲ್ಲಿ ಸಂಶಯವಿಲ್ಲ. ಜಮ್ಮೂ ಕಾಶ್ಮೀರವು ಜಾತೀಯ ಸೌಹಾರ್ದತೆಯ ಚಿನ್ನೆಯಾಗಿತ್ತು. ಅಂಥ ಸೌಹಾರ್ದತೆ ಕೆಡಲಿಕ್ಕೆ ಅವಕಾಶ ಮಾಡಿ ಕೊಡಬಾರದು. ಚುನಾವಣೆಯ ನಂತರದ ಪರಿಸ್ಥಿತಿಯಲ್ಲಿ ನ್ಯಾಷನಲ್ ಕಾನ್ಫರೆನ್ಸ ತನ್ನ ಕರ್ತವ್ಯಗಳನ್ನು ಯಾವ ರೀತಿ ಪೂರೈಸುತ್ತದೆಂಬುದರ ಮೇಲೆ ರಾಜ್ಯದ ಭವಿಷ್ಯದ ರಾಜಕಾರಣ ಅವಲಂಬಿಸಿದೆ.

ಷುಲ್ಟ್ಜ ಭೇಟಿ ಕುರಿತು ಪೊಲಿಟ್ ಬ್ಯೂರೋ

ಅಮೇರಿಕಾದ ಹಗೆ ಸಾಧಕ ಧೋರಣೆಗಳನ್ನು ಪ್ರತಿಭಟಿಸಲು ಕರೆ

ಮಾರ್ಕ್ಸವಾದೀ ಕಮ್ಯುನಿಸ್ಟ ಪಕ್ಷದ ಪೊಲಿಟ್‌ಬ್ಯೂರೋ ಜೂನ್ 28, 1983 ರಂದು ಈ ಕೆಳಗಿನ ಪತ್ರಿಕಾ ಹೇಳಿಕೆ ನೀಡಿದೆ.

ಷುಲ್ಟ್ಜ ಭಾರತಕ್ಕೆ ಭೇಟಿ ನೀಡುತ್ತಿರುವುದು ಈ ದೇಶಕ್ಕೆ ಅಥವಾ ಉಪಖಂಡಕ್ಕೆ ಸದ್ಭಾವನೆಯ ದೂತನಾಗಿಯೇನೂ ಅಲ್ಲ. ಈ ದೇಶ ಹಾಗೂ ಉಪಖಂಡದ ಜನತೆಯೊಂದಿಗೆ ಹಗೆ ಸಾಧಿಸುತ್ತಿರುವ ಅಮೇರಿಕಾದ ಧೋರಣೆಗಳನ್ನು ಮುಂದುವರಿಸಲಿಕ್ಕಾಗಿ ಈ ಭೇಟಿ.

ಒಂದಾದ ಮೇಲೊಂದರಂತೆ ಅಮೇರಿಕಾದ ಸರಕಾರಗಳು ಈ ದೇಶ ತಮಗೆ ತಲೆಬಾಗುವಂತೆ ಬೆದರಿಸಿಕೊಂಡು ಬಂದಿವೆ. ರೇಗನ್ ಸರಕಾರವೂ ಇದರಲ್ಲಿ ಹಿಂದೆ ಬಿದ್ದಿಲ್ಲ. ತಾರಾಪುರ ಬಗ್ಗೆ ಒಪ್ಪಂದವನ್ನು ಅಮೇರಿಕಾ ಸರಕಾರ ಮೋಸದಿಂದ ಮುರಿದಿದೆ. ಹಾಗೂ ಭಾರತ ಅಣುಶಕ್ತಿ ಅಭಿವೃದ್ಧಿಗೆ ಸಂಬಂಧಪಟ್ಟಂತೆ ತನ್ನ ಸ್ವಾತಂತ್ರ್ಯವನ್ನೂ ಬಿಟ್ಟುಕೊಡುವಂತೆ ಎಲ್ಲಾ ರೀತಿಯಲ್ಲಿ ಒತ್ತಡ ಹೇರುತ್ತಿದೆ. ಈ ಉಪಖಂಡದಲ್ಲಿ ಶಸ್ತ್ರಾಸ್ತ್ರಗಳನ್ನು ತಂದು ಸುರಿಯುತ್ತಿದೆ. ನಮ್ಮ ನೆರೆಯ ದೇಶಕ್ಕೆ ಎಫ್-16 ಯುದ್ಧ ವಿಮಾನಗಳು ಹಾಗೂ ಇತರ ಯುದ್ಧ ಸಾಮಗ್ರಿಗಳನ್ನು ಮಾರುತ್ತಿದೆ. ಈ ಎರಡು ದೇಶಗಳ ನಡುವೆ ಘರ್ಷಣೆ ಉಂಟು ಮಾಡುವುದಷ್ಟೇ ಇದರ ಉದ್ದೇಶ. ಅದು ತನ್ನ ಡಿಯಾಗೋ ಗಾರ್ಶಿಯಾ ಮಿಲಿಟರಿ ನೆಲೆಯನ್ನು ಬಲಪಡಿಸುತ್ತಿದೆ; ಹಿಂದೂ ಮಹಾಸಾಗರವನ್ನು ಶಾಂತಿವಲಯವನ್ನಾಗಿ ಮಾಡುವ ಬಗ್ಗೆ ಸಮ್ಮೇಳನ ನಡೆಯದಂತೆ ಸಂಚು ಮಾಡುತ್ತಿದೆ. ಕೋಟಿಗಟ್ಟಲೆ ಜನಕ್ಕೆ ಹಸಿವು ಹಾಗೂ ರೋಗ-ರುಜಿನಗಳಿಂದ ತಪ್ಪಿಸಿಕೊಳ್ಳಲು ನೆರವು ಬೇಕಾಗಿರುವಾಗ ಭಾರತ ತನ್ನ ಬಜೆಟ್ಟಿನ ಒಂದು ಗಣನೀಯ ಭಾಗವನ್ನು ರಕ್ಷಣಾ ಖರ್ಚಿಗೆ ವೆಚ್ಚ ಮಾಡುವಂತೆ ಮಾಡಿದೆ ಅಲ್ಲದೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಭಾರತದಲ್ಲಿ ಅಸ್ಥಿರತೆ ಉಂಟು ಮಾಡಬೇಕೆಂದು ಹಠತೊಟ್ಟಂತೆ ಕಾಣುತ್ತಿದೆ. ಅಸ್ಸಾಂನ ವಿಭಜನಕಾರೀ ಘರ್ಷಣೆಗಳಲ್ಲಿ ಅದರ ಕೈವಾಡ ಸ್ಪಷ್ಟವಾಗಿ ಕಂಡು ಬಂದಿದೆ. ಇಂತಹ ಪ್ರಯತ್ನಗಳ ಬಗ್ಗೆ ಸಾಮಾನ್ಯವಾಗಿ ಬಾಯಿ ತೆರೆಯದ ಪ್ರಧಾನಮಂತ್ರಿಯವರೂ ಕೂಡ ವಾಸ್ತವಿಕತೆಯನ್ನು ಒಪ್ಪಿಕೊಳ್ಳಬೇಕಾಗಿ ಬಂದಿದೆ. ಹೀಗಿದ್ದಾಗ್ಯೂ, ಈ ದೇಶದ ವಿರುದ್ಧ ತನ್ನ ತಂತ್ರಗಳನ್ನು ಮುಚ್ಚಿಡುವ ಗೋಜಿಗೂ ಅಮೇರಿಕಾ ಹೋಗುತ್ತಿಲ್ಲ. ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಅಮೇರಿಕಾದ ರಾಯಭಾರಿ ಬಹಿರಂಗವಾಗಿಯೇ ಭಾರತದ ವಿಚ್ಛಿದ್ರೀಕರಣದ ಮಾತಾಡಿದ್ದಾರೆ. ಭಾರತದಲ್ಲಿ ಅಮೇರಿಕಾದ ರಾಯಭಾರಿ ಪಂಜಾಬಿನಲ್ಲಿ ಖಲಿಸ್ತಾನ್ ಚಳವಳಿಯ ಬಗ್ಗೆ ಪ್ರಚೋದನಕಾರೀ ಹೇಳಿಕೆ ನೀಡಿದ್ದಾರೆ.

ಇಷ್ಟೇ ಅಲ್ಲ. ಐ.ಎಮ್.ಎಫ್ ಹಾಗೂ ಜಾಗತಿಕ ಬ್ಯಾಂಕ್ ಮೂಲಕ ಆರ್ಥಿಕ ಬೆದರಿಕೆಯ ಧೋರಣೆಯನ್ನು ಅಮೇರಿಕಾ ಅನುಸರಿಸುತ್ತಿದೆ. ವ್ಯಾಪಾರ ಹಾಗೂ ಅಭಿವೃದ್ಧಿ ಕುರಿತಾದ ಸಂಯುಕ್ತ ರಾಷ್ಟ್ರದ ಆಯೋಗ [Unctad] ದ ಮಾತುಕತೆಗಳನ್ನು ವಿಫಲಗೊಳಿಸಿ ಅಭಿವೃದ್ಧಿಶೀಲ ದೇಶಗಳ ಬಿಕ್ಕಟ್ಟು ಹಾಗೂ ಆರ್ಥಿಕ ಸಂಕಷ್ಟಗಳನ್ನು ಅದು ಹೆಚ್ಚಿಸಿದೆ. ತನ್ನ ಆರ್ಥಿಕ ಸಂಪರ್ಕಗಳನ ಅದು ನಮ್ಮ ದೇಶದ ಹಿತಾಶಕ್ತಿಗಳ ವಿರುದ್ಧ ಸಿ.ಐ.ಎ. ಚಟುವಟಿಕೆಗಳಿಗೆ ಬಳಸುತ್ತಿದೆಯೆಂಬುದು ತಿಳಿದ ವಿಷಯ. ಬಹು ರಾಷ್ಟ್ರೀಯ ಸಂಸ್ಥೆಗಳ ಪರವಾಗಿ ಆರ್ಥಿಕ ಹಾಗೂ ರಾಜಕೀಯ ಒತ್ತಡ ಹೇರಲು ಸಾಧ್ಯವಾದುದನ್ನೆಲ್ಲಾ ಷುಲ್ಟ್ಜ ಮಾಡುತ್ತಾರೆ. ರಕ್ಷಣಾ ಸಿದ್ಧತೆ ಹಾಗೂ ಅಣುಶಕ್ತಿ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಬಿಡುವಂತೆಯೂ ಅತ ಭಾರತ ಸರಕಾರದ ಮೇಲೆ ಒತ್ತಡ ಹೇರುವ ಸಂಭವವಿದೆ.

ಈ ಭೇಟಿ ಹಾಗೂ ನಮ್ಮ ದೇಶದ ವಿರುದ್ಧ ಅಮೇರಿಕಾದ ಹಗೆ ಸಾಧಕ ಧೋರಣೆಗಳನ್ನು ಎಲ್ಲಾ ದೇಶ ಪ್ರೇಮೀ ಶಕ್ತಿಗಳೂ ಪ್ರತಿಭಟಿಸಬೇಕು. ಅಮೇರಿಕಾದ ಒತ್ತಡಕ್ಕೆ ಶರಣಾಗಬಾರದೆಂದು ಸರಕಾರವನ್ನು ಎಚ್ಚರಿಸಬೇಕು. ಎಲ್ಲಕ್ಕೂ ಮಿಗಿಲಾಗಿ ಅಮೇರಿಕಾದ ಯುದ್ಧ ಹಾಗೂ ಅಣುವಿನಾಶದ ಯೋಜನೆಗಳ ವಿರುದ್ಧ ತಮ್ಮ ದನಿ ಎತ್ತಬೇಕು. ಎಲ್ಲಾ ವಿಭಾಗಗಳೂ ಅಮೇರಿಕಾದ ನ್ಯೂಕ್ಲಿಯರ್ ಯುದ್ಧದ ರಾಕ್ಷಸೀ ಯೋಜನೆಗಳನ್ನು ಹಾಗೂ ನಮ್ಮ ದೇಶದ ಸ್ವಾತಂತ್ರ್ಯ ಹಾಗೂ ಸಮಗ್ರತೆಯ ವಿರುದ್ಧ ಅಮೇರಿಕಾದ ಸಂಚನ್ನು ಬಲವಾಗಿ ಖಂಡಿಸಬೇಕು.

ಕರ್ನಾಟಕ ರಾಜ್ಯದಲ್ಲಿ

(3ನೇ ಪುಟದಿಂದ)

ಹೀಗಾಗಿ ಈಗ ಕೇಂದ್ರ ಸರಕಾರ ಬೆಲೆ ನಿರ್ಣಯಿಸುವ ಕ್ರಮ ತಪ್ಪಾಗಿದೆ, ಇದರಲ್ಲಿ ಬದಲಾವಣೆಯಾಗಬೇಕೆಂದು ರೈತ ಸಂಘಗಳು ಬೇಡುತ್ತ ಬಂದಿವೆ. ಬೆಲೆ ನಿರ್ಣಯಿಸುವ ಸಮಿತಿಗಳಲ್ಲಿ ರೈತರ ಪ್ರತಿನಿಧಿಗಳೂ ಇರಬೇಕೆಂದು ನಮ್ಮ ಅಪೇಕ್ಷೆ.

ಈಗ ಕರ್ನಾಟಕದ ಜನತಾ ಸರಕಾರ ಧೈರ್ಯದ ಬೇಡಿಕೆಯನ್ನು ಕೇಂದ್ರಕ್ಕೆ ಮಂಡಿಸಿದೆ. ಕೃಷಿ ಉತ್ಪಾದನೆಗಳ ಬೆಲೆ ನಿಗದಿ ಮಾಡಲು ರಾಜ್ಯಮಟ್ಟದ ಕೃಷಿ ಬೆಲೆ ಆಯೋಗ ರಚಿಸಬೇಕೆಂದು ರಾಜ್ಯ ಸರಕಾರ ಕೇಂದ್ರವನ್ನು ಕೇಳಿ ಕೊಂಡಿದೆ. ಇದರಂತೆಯೇ ದಕ್ಷಿಣದ ಇತರ ರಾಜ್ಯಗಳೂ ತಮ್ಮ ಬೇಡಿಕೆ ಮಂಡಿಸಿವೆ.

ಕೇಂದ್ರ ಸರಕಾರ ತನ್ನ ಕಾರ್ಯ ದಲ್ಲಿ ವಿಫಲಗೊಂಡಾಗ, ರಾಜ್ಯ ಸರ ಕಾರಗಳು ತಮ್ಮದೇ ಆದ ಕೃಷಿ ಬೆಲೆ ಆಯೋಗಗಳನ್ನು ರಚಿಸಿಕೊಳ್ಳಲು ಅವಕಾಶ ಬೇಕೆಂದು ಕೇಂದ್ರವನ್ನು ಕೇಳಿಕೊಂಡಿರುವುದು ನ್ಯಾಯಬದ್ಧ ವಾಗಿದೆ. ಈ ಬೇಡಿಕೆಯನ್ನು ನಾವು ಬೆಂಬಲಿಸುತ್ತೇವೆ. ವ್ಯವಸಾಯ ಖರ್ಚು ಬೇರೆ ಬೇರೆ ರಾಜ್ಯಗಳಲ್ಲಿ ಹೆಚ್ಚು ಕಡಿಮೆ ಆಗಬಹುದಾಗಿರುವು ದರಿಂದ, ದೇಶಾದ್ಯಂತ ಒಂದೇ ಬೆಲೆ ನಿರ್ಧರಿಸುವುದರಿಂದ ರೈತರಿಗೆ ನ್ಯಾಯ ಸಿಗಲಿಕ್ಕಿಲ್ಲ. ಆ ದೃಷ್ಟಿಯಿಂದ ಕರ್ನಾ ಟಕ ರಾಜ್ಯದ ಬೇಡಿಕೆ ಯೋಗ್ಯವಾಗಿದೆ. ಬೆಲೆ ನಿರ್ಧರಿಸಲ್ಪಟ್ಟ ನಂತರ ರೈತರಿಂದ ಖರೀದಿಸಿ, ಗ್ರಾಹಕರಿಗೆ ಮಾರಾಟ ಮಾಡಲು ತಕ್ಕ ವ್ಯವಸ್ಥೆಯನ್ನು ಸರ ಕಾರ ಮಾಡಲೇ ಬೇಕು. ಇಲ್ಲವಾದರೆ ದಳ್ಳಾಳಿಗಳೂ, ವ್ಯಾಪಾರಸ್ಥರೂ, ರೈತರನ್ನೂ-ಗ್ರಾಹಕರನ್ನೂ ಸುಲಿಯು ತ್ತಿರುವುದು ತಡೆ ಹಿಡಿಯಲು ಸಾಧ್ಯ ವಿಲ್ಲ.

ಮಂಗಳೂರು

ಬೀಡಿ ಕಾರ್ಮಿಕರ ಅನ್ನ ಸತ್ಯಾಗ್ರಹ

ತಾ. 26-5-83ರಂದು ಬೆಂಗಳೂರಿ ನಲ್ಲಿ ಬೀಡಿ ಮಾಲಿಕರ, ಕಾರ್ಮಿಕರ ಮತ್ತು ಸರಕಾರದ ಪ್ರತಿನಿಧಿಗಳಿದ್ದು ನಡೆದ ತ್ರಿಪಕ್ಷೀಯ ಒಪ್ಪಂದದಂತೆ ಸಾವಿರ ಬೀಡಿ ಕಟ್ಟಿದ್ದಕ್ಕೆ ರೂ. 8-80 ಕೂಲಿ ಸಿಗಬೇಕಾಗಿದೆ.

ಆದರೆ ಬೆಳ್ತಂಗಡಿಯಲ್ಲಿ ಭಾರತ್ ಬೀಡಿಯ ಕಾರ್ಮಿಕರಿಗೆ ಈ ಸವ ಲತ್ತುಗಳು ಸಿಗದೆ ಅವರು ಹೋರಾ ಟಕ್ಕೆ ಇಳಿದಿದ್ದಾರೆಂದು ತಿಳಿದು ಆಶ್ಚರ್ಯವಾಯಿತು. ಒಪ್ಪಂದದ ಶರ್ತಗಳಂತೆ ಕೂಲಿ ಪಾವತಿ ಮಾಡು ವುದು ಮಾಲಿಕರ ಆದ್ಯ ಕರ್ತವ್ಯ. ಹಾಗೂ ನಿಗದಿ ಪಡಿಸಿದ ಕೂಲಿ ನೀಡ ದಿದ್ದುದು ಖಂಡನೀಯ.

ಆದುದರಿಂದ ಭಾರತ್ ಬೀಡಿ ಮಾಲಿಕರ ಮಂಗಳೂರಿನ ಕೇಂದ್ರ ಡಿಪ್ಪೋದೆದುರು ಜಿಲ್ಲೆಯ ಬೀಡಿ ವರ್ಕರ್ಸ್ ಫೆಡರೇಶನ್ ಮುಂದಾಳು ಗಳು (ಸಿ.ಐ.ಟಿ.ಯು) ಕಾರ್ಯದರ್ಶಿ ಕಾ. ಯು. ಬಿ. ಲೋಕಯ್ಯನವರ ನೇತೃತ್ವದಲ್ಲಿ ಬೆಳ್ತಂಗಡಿಯ ಕಾರ್ಮಿ ಕರಿಗೆ ಎಲ್ಲಾ ಸವಲತ್ತುಗಳು ಸಿಗಲು ಒತ್ತಾಯಿಸಿ ಅನ್ನ ಸತ್ಯಾಗ್ರಹ ನಡೆ ಸಲು ನಿರ್ಧರಿಸಿರುತ್ತಾರೆ.

ಜೆ. ಕೆ. ಸಿಂಥೆಟಿಕ್ಸ್ ಕಾರ್ಮಿಕರಿಗೆ ಸಹಾಯ ನೀಡಿ

ಸಿ.ಐ.ಟಿ.ಯು. ರಾಜ್ಯ ಸಮಿತಿಯ ಮನವಿ

ಪ್ರಿಯ ಸಂಗಾತಿ,

ಜೆ. ಕೆ. ಸಿಂಥೆಟಿಕ್ಸ್ ಆಡಳಿತ ಮಂಡಳಿಯು ಆ ಕಾರ್ಖಾನೆಯಲ್ಲಿದ್ದ 4800 ರಲ್ಲಿ ಶೇ 50ರಷ್ಟು ಎಂದರೆ 2400 ಕಾರ್ಮಿಕರನ್ನು 21-1-83 ರಿಂದ ರಿಟ್ರೆಂಚ್ ಮಾಡಿತು. ಆಡಳಿತ ಮಂಡಳಿಯು ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟಿನ ನಿಯಮಗಳನ್ನು ಉಲ್ಲಂಘಿಸಿರುವುದು ಮಾತ್ರವೇ ಅಲ್ಲ, ರಿಟ್ರೆಂಚ್ ಮಾಡುವುದಿಲ್ಲವೆಂದೂ ಒಂದುವೇಳೆ ಹೆಚ್ಚುವರಿ ಕೆಲಸಗಾರರು ಕಂಡುಬಂದರೆ ಅವರಿಗೆ ಬದಲಿ ಕೆಲಸ ಕೊಡುವುದಾಗಿಯೂ ಕಾರ್ಮಿಕ ಸಂಘ ದೊಂದಿಗೆ 24-9-1982 ರಂದು ಮಾಡಿಕೊಂಡ ಒಪ್ಪಂದವನ್ನೂ ಉಲ್ಲಂಘಿಸಿದೆ.

ಲಾಭಗಳು ಕಡಿಮೆಯಾಗುತ್ತಿರುವು ದರಿಂದ ಆಡಳಿತ ಮಂಡಳಿಗೆ ರಿಟ್ರೆಂಚ್ ಮಾಡದೆ ಬೇರೆ ದಾರಿಯಿಲ್ಲವೆಂದು ಅವರು ವಾದಿಸುತ್ತಾರೆ. ಆದರೆ ಈ ವಾದ ಪೊಳ್ಳು, 1961ರಿಂದ ಈ ಸಂಸ್ಥೆ ಯಲ್ಲಿ ಬಂಡವಾಳ ಹೂಡಿರುವ ಶೇರು ದಾರರಿಗೆ; ಹಿಂದೆ ಅವರಿಗೆ ಕೊಟ್ಟಿ ರುವ ಬೋನಸ್ಸು ಶೇರುಗಳಿಂದಾಗಿ ಸಿಕ್ಕಿರುವ ಡಿವಿಡೆಂಡ್ ಶೇ 100 ರಿಂದ ಶೇ 120 ರವರೆಗೆ ಇದೆ.

ರಾಜಾಸ್ಥಾನದಲ್ಲಿ ಸಿ. ಐ.ಟಿ. ಯು. ಧೋರಣೆಯನ್ನು ಎತ್ತಿಹಿಡಿದು ಎಲ್ಲಾ ವಿಚ್ಛಿದ್ರಕಾರಿ ಪ್ರಯತ್ನಗಳ ವಿರುದ್ಧ ಯಶಸ್ವೀ ಹೋರಾಟವನ್ನು ಮಾಡು ತ್ತಿರುವ ಕೋಟಾದ ಜೆ. ಕೆ. ಸಿಂಥೆಟಿಕ್ಸ್‌ನ ವೀರಕಾರ್ಮಿಕರು ಈ ರಿಟ್ರೆಂಚ್‌ಮೆಂಟ್ ದಾಳಿಯ ವಿರುದ್ಧ ಹೋರಾಡುತ್ತಿದ್ದಾರೆ.

ಸಿ. ಐ. ಟಿ. ಯು. ರಾಜ್ಯಸಮಿತಿಯ ಮಾರ್ಗದರ್ಶನದಲ್ಲಿ ರಾಜಾಸ್ಥಾನದ ಕಾರ್ಮಿಕ ವರ್ಗವು ಜೆ. ಕೆ. ಸಿಂಥೆಟಿಕ್ಸ್ ನ ವೀರಕಾರ್ಮಿಕರಿಗೆ ಸೌಹಾರ್ದ ಬೆಂಬಲ ಕೊಡುತ್ತಿದೆ. ಸ್ವಲ್ಪ ಧನ ಸಹಾಯ ಮಾಡುತ್ತಿದೆ, ಅಗತ್ಯ ವಿರುವ ಧನಸಹಾಯ ಮಾಡಲು ಸಿ. ಐ. ಟಿ. ಯು. ರಾಜಾಸ್ಥಾನದ ಸಮಿತಿಯಿಂದಲೇ ಸಾಧ್ಯವಿಲ್ಲ.

ದೇಶದಲ್ಲಿರುವ ಎಲ್ಲಾ ಸಿ. ಐ.ಟಿ.ಯು. ಕಾರ್ಮಿಕ ಸಂಘಗಳೂ ಕೂಡಲೇ ಈ ಕಾರ್ಮಿಕರಿಗೆ ಹಣವನ್ನು ಕಳುಹಿಸ ಬೇಕೆಂದು ಸಿ. ಐ. ಟಿ. ಯು. ಅಧ್ಯಕ್ಷರಾದ ಕಾಮ್ರೇಡ್ ಬಿ. ಟಿ. ರಣದಿವೆಯವರು ಕರೆಕೊಟ್ಟಿದ್ದಾರೆ. ಸಿ. ಐ. ಟಿ. ಯು. ಕೇಂದ್ರದ ಸುತ್ತೋಲೆ ಸಂ. 28:83 ತಾ : 26-5-1983 ಈಗಾಗಲೇ ತಲಪಿರಬಹುದೆಂದುಕೊಂಡಿದ್ದೇವೆ. ನೀವು ಕಳುಹಿಸಿರುವ ಹಣದ ವಿವರ ವನ್ನು ಕೂಡಲೇ ಸಿ. ಐ. ಟಿ. ಯು. ರಾಜ್ಯಕೇಂದ್ರಕ್ಕೆ ತಿಳಿಸಬೇಕು. ಇನ್ನೂ ಕಳುಹಿಸದಿದ್ದರೆ ತಕ್ಷಣವೇ ಕಳುಹಿಸಬೇಕು.

ರಾಜ್ಯ ಸಮಿತಿಯ 28-6-83 ಸುತ್ತೋಲೆಯಲ್ಲಿ ಈ ಕಾರ್ಮಿಕರ ಬೆಂಬಲಾರ್ಥವಾಗಿ ರಾಜಾಸ್ಥಾನದ ಮುಖ್ಯಮಂತ್ರಿಯವರಿಗೆ ತಂತಿ ಕೊಡ ಬೇಕೆಂದು ತಿಳಿಸಲಾಗಿದ್ದಿತು. ತಂತಿ ಕಳುಹಿಸಿರುವ ಸುದ್ದಿ ಆರು ಕಡೆಗಳಿಂದ ಮಾತ್ರ ಬಂದಿದೆ. ಉಳಿದ ಕಾರ್ಮಿಕ ಸಂಘಗಳು ತಂತಿಯನ್ನು ಕಳುಹಿ ಸಿಲ್ಲವೇ ?

ಕರ್ನಾಟಕದಲ್ಲಿರುವ ಸಿ.ಐ.ಟಿ.ಯು ಸದಸ್ಯರು ಇತರ ರಾಜ್ಯಗಳ ಸಿ.ಐ.ಟಿ. ಯು. ಸದಸ್ಯರ ಜತೆ ಸೇರಿ ಭುಜ ಕೊಟ್ಟು ಹೋರಾಡ ಬೇಕೆಂಬುದನ್ನು, ತಲೆಎತ್ತಿ ನಿಲ್ಲಬೇಕು ಎಂಬದನ್ನು ಗಮನದಲ್ಲಿಟ್ಟುಕೊಂಡು ಜೆ. ಕೆ. ಸಿಂಥೆಟಿಕ್ಸ್ ಕಾರ್ಮಿಕರಿಗೆ ಧನಸಹಾಯ ಮಾಡಬೇಕು. ಇನ್ನೂ ತಂತಿ ಕಳುಹಿ ಸದಿರುವ ಕಾರ್ಮಿಕ ಸಂಘಗಳು ಕೂಡಲೇ ತಂತಿ ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಇತಿ ವಿಪ್ಲವ ವಂದನೆಗಳು,

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ.

ಹಣ ಕಳುಹಿಸಬೇಕಾದ ವಿಳಾಸ :

The General Secretary
C. I. T. U.
6, Talkatora Road,
New Delhi-110 001.

ಗುಲ್ಬರ್ಗಾ

ರೈತಸಂಘ ಪ್ರಾರಂಭ

ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ನೀರಲಕೋಡ್ ಎಂಬ ಗ್ರಾಮದಲ್ಲಿ ದಿನಾಂಕ 22-6-83 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಘಟಕವು ಪ್ರಾರಂಭ ವಾಯಿತು.

ಸಾಯಂಕಾಲ ನಡೆದ ಬಹಿರಂಗ ಸಭೆಯಲ್ಲಿ ಉದ್ಘಾಟನೆಗಾಗಿ ಬಂದಿದ್ದ ಕಾ। ಮೆಹಬೂಬ ಜಲಾಲ್‌ರವರು ರೈತರ ಸಮಸ್ಯೆಗಳನ್ನು ಮತ್ತು ಅವರು ಇಂದು ರೈತರೆಲ್ಲಾ ಒಗಟ್ಟಾಗಿ ಇರ ಬೇಕಾದ ಆವಶ್ಯಕತೆಯನ್ನು ಹೇಳಿ ದರು.

ಶ್ರೀ ಖಂಡಪ್ಪಗೌಡರವರು ಅಧ್ಯ ಕ್ಷತೆಯನ್ನು ಮತ್ತು ಸುಭಾಷ್ ಸರಡಗಿ ಯವರು ಮುಖ್ಯ ಅತಿಥಿ ಸ್ಥಾನವನ್ನು ವಹಿಸಿದ್ದರು.

ಕಾ। ನಿಂಗಳ್ ಮತ್ತು ಕಾ। ಬಾಜಿ ರಾವ್‌ರವರು ಭಾಷಣಕಾರರಾಗಿ ಮಾತನಾಡಿ ಸಂಘಟನೆಯನ್ನು ಬಲ ಪಡಿಸಲು ಹಾಗೂ ರೈತರೆಲ್ಲಾ ಒಗ್ಗಟ್ಟಾಗಿ ಇತರ ಶಕ್ತಿಗಳನ್ನು ಎದುರಿ ಸಲು ಕರೆ ಕೊಟ್ಟರು.

ಕೊನೆಯದಾಗಿ ಪದಾಧಿಕಾರಿಗಳ ಆಯ್ಕೆಯಾಯಿತು.

ಅಧ್ಯಕ್ಷರು ಕಾ। ವೆಂಕೋಬರಾವ್, ಉಪಾಧ್ಯಕ್ಷರು ಗಂಗಾಧರ ಮತ್ತು ಗುಂಡಪ್ಪ, ಕಾರ್ಯದರ್ಶಿಗಳು ಕಾ। ಶರಣಯ್ಯ ಮತ್ತು ಶ್ರೀಮಂತ ತೋಣಿ ಸಿರಿಸಿಗಿ, ಸಹಕಾರ್ಯದರ್ಶಿಗಳು ಅಲ್ಲಾವುದ್ದಿನ್, ಸಂಭೋಜಿ, ಭೀಮಣ್ಣ, ಈರಪ್ಪ, ಶಾಂತಗೌಡ ಖಜಾಂಚಿ ಚುನಾಯಿತರಾದರು.

ದ. ಕನ್ನಡ

ಸಿಪಿಐ(ಎಂ)ನಿಂದ ಚಳವಳಿ ಕಾರ್ಯಕ್ರಮ

ಜೀವನಾವಶ್ಯಕ ವಸ್ತುಗಳ ಬೆಲೆ ಗಳು ಗಗನಕ್ಕೇರುತ್ತಿದ್ದು ಜನಸಾಮಾ ನ್ಯರ ಜೀವನ ದುಸ್ತರವಾಗಿದೆ. ಒಂದೇ ಸಮನೇ ಏರುತ್ತಿರುವ ಬೆಲೆಗಳನ್ನು ತಡೆಗಟ್ಟುವಲ್ಲಿ ರಾಜ್ಯದ ಜನತಾಪಕ್ಷದ ಸರ್ಕಾರವು ವಿಫಲವಾಗಿದೆ. ಸರ್ಕಾರದ ಈ ವಿಫಲತೆಯಿಂದಾಗಿ ದಾಸ್ತಾನುಗಾರ ರಿಗೂ ಕಾಳಸಂತೆಕೋರರಿಗೂ ಜನತೆ ಯನ್ನು ಶೋಷಿಸಲು ಒಳ್ಳೆಯ ಅವ ಕಾಶ ಸಿಕ್ಕಿದಂತಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ರೇಶನ್ ವ್ಯವಸ್ಥೆ ಏನೂ ಸುಧಾರಿಸಲಿಲ್ಲ.

ಈ ಪರಿಸ್ಥಿತಿಯಲ್ಲಿ ಜನತೆಯ ಸಂಕಷ್ಟವನ್ನು ಸರ್ಕಾರದ ಮುಂದೆ ತಂದು ಈ ಸರಕಾರ ಜನತೆ ಅರೆಹೊಟ್ಟೆ ಯಿಂದ ಬದುಕುವ ಕಂಗಾಲು ಪರಿಸ್ಥಿತಿ ಯನ್ನು ಅರ್ಥಮಾಡಿಕೊಳ್ಳಬೇಕೆಂದೂ, ಏರುತ್ತಿರುವ ಬೆಲೆಗಳನ್ನು ಇಳಿಸಲು ಕೂಡಲೇ ಸೂಕ್ತ ಕ್ರಮ ವಹಿಸ ಬೇಕೆಂದೂ ಒತ್ತಾಯಿಸಲು ಜುಲೈ ಮೂರನೇ ವಾರದಲ್ಲಿ ದ. ಕ. ಜಿಲ್ಲಾ ದ್ಯಂತ ತೀವ್ರ ಚಳವಳಿ ನಡೆಸಬೇಕೆಂದು ತಾ. 28-6-83 ರಂದು ಸೇರಿದ ಪಕ್ಷದ ಜಿಲ್ಲಾ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಗಿದೆ ಎಂದೂ ಅದೇ ವೇಳೆ ಭೂ ಛಿದ್ರೀಕರಣ ತಡೆ ಕಾನೂನು ಮತ್ತು ಕನ್ವರ್ಶನ್ ಕಾನೂನುಗಳಿಗೆ ರಾಜ್ಯ ಸರಕಾರವು ಕೂಡಲೇ ತಿದ್ದುಪಡಿ ತಂದು ದ. ಕ. ಜಿಲ್ಲೆಯ ಸಾವಿರಾರು ಮಂದಿತೊಂದರೆ ಗೀಡಾಗಿರುವ ಜನರನ್ನು ವಿಮುಕ್ತ ಗೊಳಿಸಬೇಕೆಂದೂ ಸರ್ಕಾರವನ್ನು ಒತ್ತಾಯಿಸಲು ಈ ಚಳವಳಿ ಸಂಘ ಟಿಸಲಾಗುವುದೆಂದೂ ದ. ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ. ಕೆ. ಆರ್. ಶ್ರೀಯಾನರು ನೀಡಿದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಗುಲ್ಬರ್ಗಾದಲ್ಲಿ ರೈತರ ಧರಣಿ, ಮೆರವಣಿಗೆ

ಆಳಂದ ತಾಲ್ಲೂಕಿನ ಅಂಬಲಗಾ, ಕುದಮುಡ. ಕಲಕುಟಗಿ. ಲಾಡ ಮುಗಳಿ, ಮಡಕಿ. ಅಪಚಂದ, ಮುದ್ದ ಡಗಾ, ಲೆಂಗಟಿ. ದಮ್ಮೂರ, ಸಲಗರ, ಕರಲಗಿ. ಬೆಳಮಗಿ, ಇತ್ಯಾದಿ ಹಳ್ಳಿ ಗಳಿಂದ 72 ರೈತ ಪ್ರತಿನಿಧಿಗಳು ದಿ. 27-6-83ರ ಬೆಳಿಗ್ಗೆ 11ಗಂಟೆಗೆ ಕಲಬುರ್ಗಿ ನೆಹರು ಗಂಜ ಬಸ್‌ನಿಲ್ದಾ ಣಕ್ಕೆ ಬಂದರು.

ಅಲ್ಲಿಂದ ಸಂಘದ ಅಧ್ಯಕ್ಷರಾದ ಮೇಘರಾಜ ಕಠಾರೆ ಕಾ॥ ಮಹಮದ ಹಸನ್‌ಖಾನ್ ಸಾಬ ಕಲ್ಲಪ್ಪ ಬೇಲಿ. ಚಂದ್ರಶೇಖರ ಶೆಳಕಿಯವರ ನೇತೃತ್ವ ದಲ್ಲಿ ಮುಖ್ಯರಸ್ತೆಯಲ್ಲಿ ಘೋಷಣೆ ಗಳನ್ನು ಕೂಗುತ್ತ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ತಲುಪಿದರು. ಅಲ್ಲಿ ಸತತವಾಗಿ ಮೂರು ಗಂಟೆಗಳ ಕಾಲ ಧರಣಿ ಸತ್ಯಾಗ್ರಹ ನಡೆಸಿದರು. ನಂತರ ಮನವಿ ಪತ್ರ ಜಿಲ್ಲಾಧಿಕಾರಿ ಗಳಿಗೆ ಅರ್ಪಿಸಿದರು. ಜಿಲ್ಲಾಧಿಕಾರಿ ಗಳು ಮುಖ್ಯ ಬೇಡಿಕೆ ಸರ್ಕಾರದ ಗಮನಕ್ಕೆ ತರುವುದಾಗಿ ಭರವಸೆ ನೀಡಿ ದರು. ಇತರ ಬೇಡಿಕೆಗಳು ಈಡೇರಿ ಸುವುದಾಗಿ ಭರವಸೆ ಇತ್ತರು.

ನಂತರ ಅಲ್ಲಿಂದ ಕರ್ನಾಟಕ ವಿಧ್ಯು ಚ್ಛಕ್ತಿ ಮಂಡಳಿ ಕಛೇರಿಗೆ ತೆರಳಿ ಅಲ್ಲಿ ಅಧಿಕಾರಿಗಳ ಜೊತೆ ರೈತರಿಗೆ ವಿಧ್ಯುತ್ ಸರಬರಾಜು ಮಾಡುವಲ್ಲಿ ವಿಳಂಬ ನೀತಿಯ ಬಗ್ಗೆ ಚರ್ಚಿಸಿದರು. ವಾಗ್ವಾ ದವೇ ನಡೆದು ಕೊನೆಗೆ ಬೇಡಿಕೆ ಈಡೇ ರಿಸುವುದಾಗಿ ಭರವಸೆ ಇತ್ತರು.

ಅಲ್ಲಿಂದ ಮುಂದೆ ಮತ್ತೆ ಮೆರ ವಣಿಗೆಯಲ್ಲಿ ಹೋಗಿ ಕಾಮಗಾರಿ ಇಲಾಖೆಯ ಮೇಲ್ವಿಚಾರಣಾ ಅಭಿ ಯಂತ ಮತ್ತು ಕರ್ನಾಟಕ ಸಾರಿಗೆ ಸಂಸ್ಥೆಯ ಅಧಿಕಾರಿಗಳಿಗೆ ಭೆಟ್ಟಿಯಾಗಿ ತಮ್ಮ ಕುಂದುಕೊರತೆಗಳ ಬಗ್ಗೆ ಗಮನ ಸೆಳೆದರು. ಬೇಡಿಕೆ ಈಡೇರಿ ಸುವುದಾಗಿ ಆಶ್ವಾಸನೆ ನೀಡಿದ ನಂತರ ಮೈದಾನದಲ್ಲಿ ಸಭೆ ಸೇರಿದರು. ಸಭೆ ಯನ್ನುದ್ದೇಶಿಸಿ ಮೇಘರಾಜ ಕಠಾರೆ ಮತ್ತು ಮಹಮದ್ ಹಸನ್‌ಖಾನ್ ಮಾತಾಡಿದರು,

ಘೋಷಣೆಗಳೊಂದಿಗೆ ಸಂಜೆ 6-15 ಗಂಟೆಗೆ ಸಭೆ ಮುಕ್ತಾಯ ವಾಯಿತು.

ಬೀಡಿ ಮಜೂರರ ಮಹಾಸಭೆ

ಉಳ್ಳಾಲ ಒಂಭತ್ತು ಕೆರೆ ಸುಂದರಿ ಭಾಗ್ ಪ್ರದೇಶದ ಬೀಡಿ ಮಜೂರರ ಮಹಾಸಭೆಯು ತಾ॥ 26-6-83 ರಂದು ಕೋಟೆ ಕಾರು ಸರ್ಕಲ್ ಬೀಡಿ ಲೇಬರ್ ಯುನಿಯನ್ ಅಧ್ಯಕ್ಷರಾದ ಕಾಮ್ರೇಡ್ ಕೆ ನಾರಾಯಣ ಶೆಟ್ಟಿ ಯವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಕಾಮ್ರೇಡ್ ಭಾಸ್ಕ ರನವರು ಸ್ವಾಗತಿಸಿ 1982-83 ರ ಲೆಕ್ಕ ಪತ್ರವನ್ನು ಸಭೆಯ ಮುಂದಿ ಟ್ಟರು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಸಭೆಯುನ್ನುದ್ದೇಶಿಸಿ ಕೋಟೆ ಕಾರು ಸರ್ಕಲ್ ಬೀಡಿ ಲೇಬರ್‌ಯೂನಿಯನ್ನ ಉಪಾಧ್ಯಕ್ಷರಾದ ಕಾಮ್ರೇಡ್ ಯು.ಬಿ. ಮಾರಪ್ಪನವರು ಸಂಘಟ ನೆಯ ಮಹತ್ವದ ಬಗ್ಗೆ ಮಾತನಾಡಿ ದರು.

ಸಭಾಧ್ಯಕ್ಷರು ಛಲಿ ಪರಿಕೆಯ ವಿರುದ್ಧ ಮಾತನಾಡಿದರು ಮುಂದಿನ ವರ್ಷಕ್ಕೆ ಕಾಮ್ರೇಡ್ ಯು. ರಾಮ ಅಧ್ಯಕ್ಷರಾಗಿಯು ಶ್ರೀಮತಿ ವಸಂತಿ ಉಪಾಧ್ಯಕ್ಷರಾಗಿಯು ಕಾಮ್ರೇಡ್ ಭಾಸ್ಕರ ಕಾರ್ಯದರ್ಶಿಯಾಗಿ ಕಾಮ್ರೆಡ್ ಯು. ಈಶ್ವರ ಜೊತೆ ಕಾರ್ಯದರ್ಶಿಯಾಗಿ ನೇಮಿಸ ಲಾಯಿತು. 22 ಮಂದಿಯ ಕಾರ್ಯ ಕಾರಿ ಸಮಿತಿಯನ್ನು ಆರಿಸಿಲಾಯಿತು ಕೊನೆಯಲ್ಲಿ ಕಾಮ್ರೇಡ್ ಗಂಗಾಧರ ಗಟ್ಟಿಯವರು ಕಂಟ್ರಾಕ್ಟು ಪದ್ಧತಿ ಯಲ್ಲಿ ಮಜೂರರಿಗೆ ಆಗುವ ಅನ್ಯಾ ಯದ ವಿರುದ್ಧ ಮಾತನಾಡಿ ಧನ್ಯವಾದ ವಿತ್ತರು.

ರಾಯಚೂರು :

ರೈತ ಸಂಘದಿಂದ ಮೆರವಣಿಗೆ

17-6-83ರಂದು ನೂರಾರು ಜನ ರೈತ-ಕೃಷಿ ಕಾರ್ಮಿಕರು ಮೆರವಣಿಗೆಯಲ್ಲಿ ಹೋಗಿ ತಹಸೀಲ ಕಛೇರಿಯನ್ನು ಘೇರಾಯಿಸಿದರು. ಸಭೆಯನ್ನುದ್ದೇಶಿಸಿ ಕಾ। ಬಾಳಿಯವರು ಮಾತನಾಡಿದರು ಎರಡು ವರ್ಷದಿಂದ ತಾಲ್ಲೂಕಿನ ಸಮಸ್ಯೆಗಳನ್ನು ಈಡೇರಿಸುವಂತೆ ಸರಕಾರಕ್ಕೆ ಒತ್ತಾಯಿಸಿ ಮೆರವಣಿಗೆ, ಧರಣಿ, ಸತ್ಯಾಗ್ರಹ ನಡೆಸಿದ್ದರೂ ಯಾವ ಪ್ರಯೋಜನವಾಗಿಲ್ಲ. ಈಗ ಸರಕಾರ ಬದಲಿಯಾಗಿದೆಯಾದರೂ ರೈತರಿಗೆ ಸಿಗಬೇಕಾದ ಪ್ರಯೋಜನ ಇನ್ನು ಸಿಕ್ಕಿಲ್ಲ ಕಾರಣ ರೈತ-ಕೃಷಿ ಕಾರ್ಮಿಕರು ಹೋರಾಟದ ಮುಖಾಂತರ ಸರಕಾರಕ್ಕೆ ಒತ್ತಾಯಿಸಬೇಕಾಗಿದೆಯೆಂದು ತಿಳಿಸಿ, ಇಂದು ತಹಸೀಲ್ದಾರರ ಬೇಡಿಕೆಗಳನ್ನು ಪ್ರಾಮಾಣಿಕವಾಗಿ ಪರಿಗಣಿಸುವುದಾದರೆ ಮಾತುಕತೆ ಮಾಡುತ್ತೇವೆ ಇಲ್ಲವಾದಲ್ಲಿ ಧರಣಿ ಮುಂದುವರೆಸಲಾಗುವುದೆಂದು ತಿಳಿಸಿದರು. ಹೊಸದಾಗಿ ಬಂದ ತಹಸೀಲದಾರರು ಕೊಟ್ಟ ಭರವಸೆಯ ನಂತರ ಮಾತುಕತೆ ನಡೆಸಲಾಯಿತು.

ಸಭೆಯಲ್ಲಿ ಹಾಜರಿದ್ದ ಕಾ। ಪಿ. ರಾಮಚಂದ್ರರಾವ್, ಅಧ್ಯಕ್ಷರು ಕರ್ನಾಟಕ ಪ್ರಾಂತ ರೈತ ಸಂಘ ಇವರು ರೈತ-ಕಾರ್ಮಿಕರನ್ನುದ್ದೇಶಿಸಿ ದೀರ್ಘ ಭಾಷಣ ಮಾಡಿದರು, ಕಾಂಗ್ರೆಸ್ ಸರಕಾರದಡಿಯಲ್ಲಿ ನಡೆದ ರೈತರ ಹೋರಾಟಗಳು, ರೈತ-ಕಾರ್ಮಿಕರ ಮೇಲೆ ನಡೆದ ದೌರ್ಜನ್ಯ ಅತಿರೇಕಕ್ಕೆ ಹೋಗಿ ಜನತೆ ಬೇಸತ್ತು ಕಾಂಗ್ರೆಸ್ ಸರಕಾರವನ್ನು ಕಿತ್ತು, ಜನತಾ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಜನತೆಯ ಅತೃಪ್ತಿ, ಹೋರಾಟದ ಪ್ರತಿಫಲವಾಗಿ ಜನತಾ ಪಕ್ಷ ಅಧಿಕಾರಕ್ಕೆ ಬಂದಿದೆ, ಈಗಲೂ ಜನತೆ ದೊಡ್ಡ ಪ್ರಮಾಣದಲ್ಲಿ ಸಂಘಟಿತರಾಗಿ ತಮ್ಮ ಬೇಡಿಕೆಗಳನ್ನು ಒತ್ತಾಯಿಸಲು ಮುಂದೆ ಬರಬೇಕೆಂದು ಕರೆಕೊಟ್ಟರು. ಸರಕಾರ ಕೇವಲ ಘೋಷಣೆ ಮಾಡಿದರೆ ಸಾಲದು ಅದರ ಜಾರಿಯಾಗಬೇಕಾದರೆ, ಜನತೆ ಹೋರಾಟ ಮಾಡಬೇಕಾಗುತ್ತದೆಂದರು.

ತಹಸೀಲದಾರರ ಜೊತೆ ದೀರ್ಘವಾಗಿ ಗ್ರಾಮವಾರು ಸಮಸ್ಯೆಗಳನ್ನು ಚರ್ಚಿಸಿ ಮನವಿಯನ್ನು ಸಲ್ಲಿಸಲಾಗಿ ತಮ್ಮ ಅಧಿಕಾರ ಮಟ್ಟದಲ್ಲಿರುವ ಬೇಡಿಕೆಗಳನ್ನು ಕೂಡಲೇ ಈಡೇರಿಸುವುದಾಗಿಯೂ, ಉಳಿದ ಬೇಡಿಕೆಗಳನ್ನು ಜುಲೈ ಹತ್ತರೊಳಗೆ ಈಡೇರಿಸುವುದಾಗಿ ಭರವಸೆಕೊಟ್ಟರು. ಕಾ। ಪಿ. ರಾಮಚಂದ್ರರಾವ್ ಅವರು ಸಹ ಚರ್ಚೆಯಲ್ಲಿ ಭಾಗವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕಾ। ಪುರುಷೋತ್ತಮ ಕಲಾಲ ಬಂಢಿ ಮತ್ತು ಕಾ. ರಾಮನಗೌಡ ಅವರು ಸಹ ಮಾತನಾಡಿದರು.

ರೈತರ ಸಭೆ

ತಾ॥ 10-6-83 ರಂದು ಬಾಗೇಪಲ್ಲಿ ತಾಲ್ಲೂಕ್ ಗೂಳೂರು ಹೋಬಳಿ ರೈತ ಸಂಘದ ಕಾರ್ಯಕರ್ತರ ಸಭೆಯನ್ನು ಕರೆಯಲಾಗಿತ್ತು.

ಕಾ॥ ಜಿ.ವಿ. ಶ್ರೀರಾಮರೆಡ್ಡಿ ರೈತ ಸಂಘದ ಬೆಳವಣಿಗೆಯ ಬಗ್ಗೆ ಮತ್ತು ರೈತ ಸಂಘದ ಕಾರ್ಯಕರ್ತರು ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸಿಕೊಳ್ಳಬೇಕೆಂದು ಕರೆಯಿತ್ತರು.

ಇಂದು ದೇಶದಲ್ಲಿ ಅನೇಕ ರೀತಿಯಾದಂತ ರೈತ ಸಂಘಗಳು ತಲೆಯೆತ್ತುತ್ತಿದ್ದು ರೈತರನ್ನು ತಪ್ಪು ದಾರಿಗೆ ಎಳೆಯುತ್ತಿರುವುದರಿಂದ ರೈತರಲ್ಲಿ ವಾಸ್ತವಿಕ ರಾಜಕೀಯ ಪ್ರಜ್ಞೆಯನ್ನು ಬೆಳೆಸಲು ನಮ್ಮ ರೈತ ಸಂಘ ಶ್ರಮಿಸಬೇಕೆಂದು ಮನವಿ ಮಾಡಿದರು.

ತಾ॥ 11-6-83 ರಂದು ಬಾಗೇಪಲ್ಲಿ ತಾಲ್ಲೂಕು ಪಾತಪಾಳ್ಯ ಹೋಬಳಿಯ ರೈತ ಸಂಘದ ಕಾರ್ಯಕರ್ತರ ಸಭೆಯನ್ನು ಕರೆಯಲಾಗಿತ್ತು. ಈ ವಿಭಾಗದಲ್ಲಿ ರೈತಸಂಘದ ಪುನರ್ ಸಂಘಟನೆ ಮಾಡಲು ತೀರ್ಮಾನಿಸಲಾಯ್ತು. ಈ ಸಭೆಯಲ್ಲಿ ಕಾ॥ ಅಪ್ಪಸ್ವಾಮಿರೆಡ್ಡಿ ಎಂ.ಎಲ್.ಎ. ಮತ್ತು ಕಾ॥ ಜಿ. ವಿ. ಶ್ರೀರಾಮರೆಡ್ಡಿಯವರು ಭಾಗವಹಿಸಿದ್ದರು. ಕಾ॥ ಕೃಷ್ಣಮೂರ್ತಿ ಅಧ್ಯಕ್ಷತೆಯನ್ನು ವಹಿಸಿದ್ದರು.

ಬಿಜಾಪುರ ರೈತರ ಸಭೆ

ತಾರೀಖು : 16-6-83ನೇ ದಿವಸ ಸಿಂದಗಿ ತಾಲ್ಲೂಕ್ ಜಾಲವಾದ ಗ್ರಾಮದಲ್ಲಿ ರೈತರ ಸಭೆ ನಡೆಸಲಾಯಿತು.

ಕರ್ನಾಟಕ ಪ್ರಾಂತ ರೈತಸಂಘದ ಉಪಾಧ್ಯಕ್ಷರು, ಬಿಜಾಪುರ ಜಿಲ್ಲಾ ರೈತಸಂಘದ ಅಧ್ಯಕ್ಷರಾದ ಕಾ॥ ಭೀಮಸಿ ಕಲಾದಗಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು ಅತಿಥಿಗಳಾಗಿ ಜಿಲ್ಲಾ ರೈತ ಸಂಘದ ಸೆಕ್ರೆಟರಿ ಸಿ. ಬಿ. ಮಣೂರ (ಜಾಲವಾದ) ಮತ್ತು ಎ. ಎಚ್. ಹೊನ್ನುಟಗಿ ಸಹಕಾರ್ಯದರ್ಶಿ ಆಗಮಿಸಿದ್ದರು.

ರೈತರ ಸಮಸ್ಯೆಗಳನ್ನುದ್ದೇಶಿಸಿ ಶ್ರೀ ಕಲಾದಗಿಯವರು ಮಾತನಾಡಿದರು. ಸಿ. ಬಿ. ಮಣೂರ ಸೆಕ್ರೆಟರಿ ಆಭಾರ ಮನ್ನಣೆ ಸಲ್ಲಿಸಿದರು ಸಭೆಯ ಅಧ್ಯಕ್ಷತೆಯನ್ನ ಶ್ರೀ ಮಾನ್ಯ ಎಸ್.ಎಸ್. ಮಣೂರ ವಹಿಸಿದ್ದರು ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಲು ಕಾರ್ಯದರ್ಶಿಯಾಗಿ ಶ್ರೀ ಆರ್.ಬಿ. ಜಾಲಿ ವಹಿಸಿದ್ದರು ಮತ್ತು ಆರ್.ಎಸ್. ಮಣೂರ ಪಿ. ಸಿ. ಕರಿಕಟ್ಟಿ, ಕುಂಬಾರ, ಗ್ರಾಮಸೇವಕರು ಸಭೆಯಲ್ಲಿ ಉಪಸ್ಥಿತರಿದ್ದರು ಕೊನೆಯದಾಗಿ ಶ್ರೀಮಾನ್ ಕೆ. ಬಿ. ಜನಗೊಂಡ ಇವರು ರೈತರ ಬಗ್ಗೆ ಮಾತನಾಡಿದರು ಮತ್ತು ಶ್ರೀಮಾನ್ ಎಸ್. ಎಸ್. ಮಣೂರ ಇವರು ರೈತರ ಸಮಸ್ಯೆಗಳ ಬಗ್ಗೆ ಮಾತನಾಡಿದರು ಸದರಿ ಸಭೆಗೆ 200ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

ತುಮಕೂರು ಜಿಲ್ಲಾ

ರೈತ ಕೃಷಿ ಕೂಲಿಗಾರರ ಸಂಘದ ಸಭೆ

ತಾರೀಖು 12-6-83ನೇ ಭಾನುವಾರದಂದು ಮೇಲ್ಕಂಡ ಸಂಘದ ಜಿಲ್ಲಾ ಸಮಿತಿಯ ಸಭೆಯು ತನ್ನ ಕಾರ್ಯಾಲಯದಲ್ಲಿ ಸಂಘದ ಅಧ್ಯಕ್ಷರಾದ ಕಾ। ಟಿ. ಕೆ. ಗೋವಿಂದರಾಜುರವರ ಅಧ್ಯಕ್ಷತೆಯಲ್ಲಿ ಸೇರಿ ಸಂಘದ ಕಾರ್ಯದರ್ಶಿಗಳಾದ ಕಾ। ಹೆಚ್. ಸಿ. ಚನ್ನಪ್ಪನವರ ಮಾರ್ಗದರ್ಶನದಲ್ಲಿ ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿಗೆ ಈ ಕೆಳಕಂಡ ಸದಸ್ಯರುಗಳನ್ನು ಆರಿಸಿದ್ದಲ್ಲದೆ ಕೆಲವು ಮುಖ್ಯನಿರ್ಣಯಗಳನ್ನೂ ಮತ್ತು ತೀರ್ಮಾನಗಳನ್ನು ಕೈಗೊಳ್ಳಲಾಯ್ತು.

ಕಾರ್ಯಕಾರಿ ಸಮಿತಿಯ ಸದಸ್ಯರುಗಳು:

ಕಾ। ಮುದ್ದರಂಗಪ್ಪನವರು, ಕಾ। ವಿ. ರಂಗಪ್ಪದಾಸ್‌ರವರು, ಕಾ। ಎಸ್ ಗೋಪಾಲಯ್ಯನವರು, ಕಾ। ಎಂ. ಎಸ್. ಚಲುವರಾಜುರವರು, ಕಾ। ಹೆಚ್. ಸಿ. ಉಜ್ಜನಪ್ಪನವರು.

ರೈತರ ಸಾಲ ಮರು ಪಾವತಿಯ ಕುರಿತು ರಾಜ್ಯ ಸರ್ಕಾರವು ಹಾಕಿರುವ ಗಡುವು ಸಮಂಜಸವಲ್ಲದಿರುವುದರಿಂದ ಸಾಲ ಮರುಪಾವತಿಯ ಕಾಲಾವಧಿಯನ್ನು ವಿಸ್ತರಿಸಬೇಕೆಂದು, ಶ್ರೀಮಂತ ರೈತರಿಂದ ಅಕ್ರಮ ಸಾಗುವಳಿಯಾಗುತ್ತಿರುವುದನ್ನು ವಿರೋಧಿಸಿ ಅಂತಹ ಭೂಮಿಯನ್ನು ಕೃಷಿ ಕಾರ್ಮಿಕರಿಗೂ ಬಡ ರೈತರಿಗೂ ಹಂಚಬೇಕೆಂದೂ ಸರ್ಕಾರವನ್ನು ಒತ್ತಾಯಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಸವದತ್ತಿ ರೈತಸಂಘದ ಮನವಿ

ಕೈಗಾರಿಕೆ ವಾಣಿಜ್ಯ ಸಚಿವರಾದ ಶ್ರೀ ಎಸ್. ಆರ್. ಬೊಮ್ಮಾಯಿಯವರು ಬೆಳಗಾವಿ ಜಿಲ್ಲೆಯ ಸವದತ್ತಿಗೆ ಭೇಟಿ ನೀಡಿದಾಗ, ಅಖಿಲ ಭಾರತ ಕಿಸಾನ್ ಸಭೆಯ "ಬೇಡಿಕೆ ಸಪ್ತಾಹ" ವನ್ನು ಆಚರಿಸಲು ಕೊಟ್ಟ ಕರೆಯ ಮೇರೆಗೆ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳ ಪರಿಶೀಲನೆಗಾಗಿ ಸವದತ್ತಿ ಕರ್ನಾಟಕ ಪ್ರಾಂತ ರೈತ ಸಂಘವು ಬೊಮ್ಮಾಯಿಯವರಿಗೆ ಮನವಿ ಅರ್ಪಿಸಿತು,

ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಿರುವ ಹಳ್ಳಿಗಳ ಶಾಶ್ವತ ಪರಿಹಾರಕ್ಕಾಗಿ ಚಿಕ್ಕ ನೀರಾವರಿ ಯೋಜನೆ ಅಡಿಯಲ್ಲಿ ಮುಗುಳಿಹಾಳ ಚಿಕ್ಕಬೂದನೂರು ಹಳ್ಳಿಗಳಿಗೆ ಕಟ್ಟೆಗಳನ್ನು ಕಟ್ಟಿಸಿ, ಉಳಿದ ಕಡೆಗಳಲ್ಲಿ ಕೊಳವೆ ಬಾವಿಗಳನ್ನು ತೋಡಿಸಬೇಕೆಂದು, ಕರ್ನಾಟಕ ಭೂಸುಧಾರಣಾ ಶಾಸನದ ಲೋಪದೋಷಗಳ ಲಾಭವನ್ನು ಜಮೀನುದಾರರು ಪಡೆಯುತ್ತಿರುವುದರಿಂದ ಸುಗ್ರೀವಾಜ್ಞೆಯ ಮೂಲಕ ಕ್ರಮ ಕೈಗೊಳ್ಳಬೇಕೆಂದು ರೈತರಿಗೆ ಹೆಚ್ಚುವರಿ ಭೂಮಿಯನ್ನು ಹಂಚುವಲ್ಲಿ ಸರ್ಕಾರ ಸ್ಥಳೀಯವಾಗಿ ಸರಿಯಾದ ಧೋರಣೆ ಹೊಂದುವಂತೆ ಅಧಿಕಾರಿಗಳಿಗೆ ಒತ್ತಾಯಿಸುವಂತೆ, ತೆರೆದ ಕೊಪ್ಪ ಗ್ರಾಮದ ಸರ್ಕಾರಿ ಅರಣ್ಯ ಭೂಮಿಯನ್ನು ಕೃಷಿ ಮಾಡಿಕೊಂಡು ಬಂದಿರುವ ರೈತರಿಗೆ ಆ ಜಮೀನನ್ನು ಕೊಡುವಂತೆ, ರೈತರ ಸಾಲ ಮನ್ನಾ ಮಾಡುವಂತೆ ಮತ್ತು ಸಾಲ ವಸೂಲಿಗೆ ಜಪ್ತಿ ವಗೈರೆ ಬಲತ್ಕಾರ ಕ್ರಮವನ್ನು ತೆಗೆದುಕೊಳ್ಳಬಾರದೆಂದು ಪುನರ್ವಸತಿ ಶನಗೊಂಡ ಹಳ್ಳಿಗಳಿಗೆ ರಸ್ತೆ ಮತ್ತು ಬಸ್ ಸಂಚಾರವನ್ನು ಪ್ರಾರಂಭಿಸಬೇಕೆಂದು ಹಾಗೂ ಬೊಮ್ಮಾಯಿ ಸಲ್ಲಿಸಿದ ವರದಿಯ ಶಿಫಾರಸುಗಳನ್ನು ಕೂಡಲೇ ಜಾರಿಗೆ ತರಬೇಕೆಂದು ಮನವಿಯಲ್ಲಿ ತಿಳಿಸಲಾಗಿತ್ತು.

ರೈತಸಂಘದ ಅಧ್ಯಕ್ಷ ಎಸ್.ಎಸ್. ಕಪ್ಪಣ್ಣ, ನಿತ್ಯಾನಂದ ಸ್ವಾಮೀಜಿ. ಅಲ್ಲಮಪ್ರಭು ಮನಗೂಳಿ ಹಾಗೂ ಸಂಕಪ್ಪ ಮುಂತಾದವರಿಂದ ಅರ್ಪಿಸಿದ ಮನವಿಯನ್ನು ಸ್ವೀಕರಿಸಿದ ಸಚಿವರು ಬೇಗನೆ ಎಲ್ಲಾ ರೈತ ಸಂಘದ ನಾಯಕರನ್ನೂ ಚರ್ಚೆಗೆ ಕರೆಯುವುದಾಗಿ ಆಶ್ವಾಸನೆ ನೀಡಿದರು.

ಮುದೇನಕೊಪ್ಪದಲ್ಲಿ ರೈತರ ಸಭೆ

"ಸ್ವಾತಂತ್ರ್ಯ ಸಿಕ್ಕಾಗಿನಿಂದ ದೇಶದ ಸರಕಾರ ಬಂಡವಾಳಶಾಹಿಗಳ ಪರವಾದ ನೀತಿಯನ್ನು ಅನುಸರಿಸುತ್ತಾ ಬಂದುದರಿಂದ ಇಂದು ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಸಿಗದಂತಾಗಿ ಒಕ್ಕಲುತನ ಒಂದು ಲಾಭದಾಯಕ ಉದ್ಯೋಗವಾಗಿ ಉಳಿದಿಲ್ಲ." ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಬೆಳಗಾವಿ ಜಿಲ್ಲಾ ಕಾರ್ಯದರ್ಶಿ ಸವದತ್ತಿಯ ಕಾ।। ನಿತ್ಯಾನಂದ ಸ್ವಾಮಿಜಿ ಹೇಳಿದರು. ಅವರು ದಿನಾಂಕ 13-6-83 ರಂದು ರಾಮದುರ್ಗ ತಾಲ್ಲೂಕಿನ ಮುದೇನಕೊಪ್ಪ ಗ್ರಾಮದಲ್ಲಿ ರೈತರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. "ದೇಶದ ಉದ್ಯೋಗಪತಿಗಳಿಗೆ ಲಾಭ ಗಳಿಸಲು ಎಲ್ಲ ವಿಧದ ಸೌಲಭ್ಯಗಳನ್ನು ಕೊಡಲಾಗುತ್ತಿದೆ; ಅವರ ಕೈಗಾರಿಕಾ ಉತ್ಪನ್ನಗಳ ಬೆಲೆಗಳನ್ನು ಏರಿಸುತ್ತಾ ಹೋಗಲು ಅವಕಾಶ ಮಾಡಿಕೊಡಲಾಗುತ್ತದೆ ಎಂದು ಆಪಾದಿಸಿದ ಸ್ವಾಮೀಜಿಯವರು ಈ ಬಂಡವಾಳಶಾಹಿಗಳ ಹಣದಿಂದ ಅಧಿಕಾರಕ್ಕೆ ಬರುವ ಸರಕಾರ ಇವರನ್ನು ಹೇಗೆ ನಿಯಂತ್ರಿಸಬಲ್ಲದು ? ಎಂದು ಪ್ರಶ್ನಿಸಿದರು. ದೇಶದ ರೈತರು ಹಾಗೂ ಕಾರ್ಮಿಕರು ಒಟ್ಟಾಗಿ ನಿಂತು, ತಮ್ಮ ಐಕ್ಯ ಹೋರಾಟದಿಂದ ಈ ಬಂಡವಾಳಶಾಹಿ ವ್ಯವಸ್ಥೆಯನ್ನು ನಾಶಮಾಡಿ ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸುವವರೆಗೆ ದೇಶದ ದುಡಿಯುವ ಜನರ ಸಮಸ್ಯೆಗಳಿಗೆ ಪರಿಹಾರ ದೊರಕದು ಎಂದು ಅವರು ಹೇಳಿದರು.

ಮುದೇನಕೊಪ್ಪದ ಪ್ರಗತಿಪರ ರೈತರಾದ ಸರ್ವಶ್ರೀ ಹನುಮಂತಗೌಡ ರಾಯನಗೌಡರು, ಐ. ಎಸ್. ಜಗಾಪೂರ ಬಸಪ್ಪಕುರಿ ಮತ್ತು ಬಸವರಾಜ ಹರ್ತಿ ಇವರು ಈ ಸಭೆಯನ್ನು ಏರ್ಪಡಿಸಿದ್ದರು. ಆರಂಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಮದುರ್ಗ ತಾಲ್ಲೂಕ್ ಸಂಚಾಲಕ ಕಾ।। ವ್ಹಿ. ಪಿ. ಕುಲಕರ್ಣಿ ಸ್ವಾಗತಿಸಿದರು. ಗ್ರಾಮದ ಹಿರಿಯರಾದ ಶ್ರೀ ವಿ. ತ. ಕುಲಕರ್ಣಿ ಇವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಘಟಕವೊಂದನ್ನು ಮುದೇನಕೊಪ್ಪದಲ್ಲಿ ಸ್ಥಾಪಿಸಿ ತಮ್ಮ ಸಮಸ್ಯೆಗಳ ಸಲುವಾಗಿ ಹೋರಾಡಲು ನಿರ್ಣಯಿಸಿದ್ದಾರೆ.

ಶಹಾಪುರ :

ರೈತ ಕಾರ್ಯಕರ್ತರ ಅಧ್ಯಯನ ಶಿಬಿರ

ಜೂನ್ 7 ರಿಂದ 8ರವರೆಗೆ ಶಹಾಪುರ ನಗರದಲ್ಲಿ ರೈತ ಕಾರ್ಯಕರ್ತರ ಅಧ್ಯಯನ ಶಿಬಿರ ನಡೆಸಲಾಯಿತು. ಈ ಅಧ್ಯಯನ ಶಿಬಿರಕ್ಕೆ ಕಾ॥ ಪಿ. ರಾಮಚಂದ್ರರಾವ್, ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರೂ, ಎಂ.ಎಲ್.ಎ, ಹಾಗೂ ಕಾ॥ ವಿ.ಜಿ. ಹಳಕಟ್ಟಿ, ಕ. ಪ್ರಾ. ರೈ. ಸಂಘದ ಕಾರ್ಯದರ್ಶಿ ಇವರು ಬಂದಿದ್ದರು.

ಈಗಿನ ರಾಜಕೀಯ ಪರಿಸ್ಥಿತಿ ಹಾಗೂ ರೈತ ಸಂಘಟನೆ ಏಕೆ ಬೇಕು. ಮತ್ತು ರೈತರಲ್ಲಿ ರಾಜಕೀಯ ಪ್ರಜ್ಞೆ ರೈತ ಸಂಘದ ಕಾರ್ಯಕ್ರಮ ಹೋರಾಟದ ಬಗ್ಗೆ ರೈತ ಕಾರ್ಯಕರ್ತರಿಗೆ ವಿವರಿಸಿದರು. ಅಧ್ಯಯನ ಶಿಬಿರಕ್ಕೆ ರೈತ ಕಾರ್ಯಕರ್ತರು, ವನದುರ್ಗ, ಶಟ್ಟಿಕೇರ ತಗ್ಗಿ ಹಳ್ಳಿ, ದರಿಯಾಪುರ, ಶಹಾಪೂರ. ತಳ್ಳಬೀಡಿ, ಹೇರೂರ, ಮಡ್ನಾಳ, ಗುರುಸಣಗಿ, ಅನೇಕ ಗಾಮಗಳಿಂದ ಒಟ್ಟು 56 ಜನ ರೈತ ಕಾರ್ಯಕರ್ತರು ಭಾಗವಹಿಸಿದ್ದರು.

ಮುಂದೆ ಶಹಾಪುರ ಮತ್ತು ಸೂರಪುರ ತಾಲ್ಲೂಕುಗಳಲ್ಲಿ ರೈತ ಸಂಘದ ಹೋರಾಟ ಯಾವರೀತಿಯಿಂದ ನಡೆಸಬೇಕು ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಶೀಘ್ರವಾಗಿ ಪೂರ್ತಿಗೊಳಿಸಬೇಕೆಂದು ಚಳವಳಿ ತರುವ ಬಗ್ಗೆ ಚರ್ಚಿಸಲಾಯಿತು.

ಭದ್ರಾವತಿಯಲ್ಲಿ ಉಕ್ಕು ಕಾರ್ಮಿಕರ ಬೃಹತ್ ಪ್ರದರ್ಶನ

ಉಕ್ಕು ಕಾರ್ಮಿಕರ ಮಾತುಕತೆಗಳಲ್ಲಿ ಸಿ.ಐ.ಟಿ.ಯು. ಪ್ರತಿನಿಧಿಗಳು ಮುತುವರ್ಜಿ ವಹಿಸಿ ದಿನಾಂಕ 25-5-83 ರಂದು ಒಪ್ಪಂದ ಆಗಿತ್ತು. ಆದರೆ ಇಲ್ಲಿಯವರೆಗೆ ವಿ. ಐ. ಎಸ್. ಎಲ್. ಆಡಳಿತ ವರ್ಗ ಒಪ್ಪಂದವನ್ನು ಜಾರಿ ಮಾಡದೆ ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುತ್ತಿರುವುದರ ವಿರುದ್ಧ ಹಾಗೂ ಮಾನ್ಯತೆ ಪಡೆದ ಕಾರ್ಮಿಕ ಸಂಘದ ಪದಾಧಿಕಾರಿಗಳು ಮಾಲೀಕರೊಂದಿಗೆ ಶಾಮೀಲಾಗಿ ಕಾರ್ಮಿಕ ವಿರೋಧಿ ನೀತಿಯನ್ನನುಸರಿಸುತ್ತಿರುವುದರ ವಿರುದ್ಧ ಪ್ರತಿಭಟಿಸಿ ಸುಮಾರು 5 ಸಹಸ್ರ ಉಕ್ಕು ಕಾರ್ಮಿಕರು ದಿನಾಂಕ 4-7-83 ರಂದು ಭಾರಿ ಪ್ರದರ್ಶನ ನಡೆಸಿದರು. ಈ ಪ್ರದರ್ಶನದಲ್ಲಿ ಮುಖ್ಯವಾಗಿ ಉಕ್ಕು ಕಾರ್ಮಿಕರ ಒಕ್ಕೂಟದ ಕಾರ್ಯಕರ್ತರು ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿದರು.

ಕುಂದಾಪುರ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆ

ತಾರೀಖು 12-6-1983 ರಂದು ಕುಂದಾಪುರ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆಯು ಕಾ॥ ಅಬ್ರಹಾಂ ಕರ್ಕಡರವರ ಅಧ್ಯಕ್ಷತೆಯಲ್ಲಿ ಸೇರಿತು. ಆರಂಭದಲ್ಲಿ ಕಾ॥ ವಿ. ಮಹಾಬಲರವರು ಸ್ವಾಗತ ಭಾಷಣ ಮಾಡಿದರು.

ಸಂಘದ ಕಾರ್ಯದರ್ಶಿಯವರಾದ ಕಾ॥ ಕೆ. ಶಂಕರ್‌ರವರು ಮಂಡಿಸಿದ ಹಿಂದಿನ ಒಂದು ವರ್ಷದ ಚಟುವಟಿಕೆ ಹಾಗೂ ಚಳವಳಿಯ ಲಿಖಿತ ವರದಿಯನ್ನೂ ಸಂಘದ ಲೆಕ್ಕಪತ್ರವನ್ನು ಸಭೆಯು ಅಂಗೀಕರಿಸಿತು.

ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸದಸ್ಯರೂ, ಪಕ್ಷದ ತಮಿಳುನಾಡು ಘಟಕದ ಸೆಕ್ರೆಟಾರಿಯೇಟ್ ಸದಸ್ಯರೂ, ತಮಿಳು ನಾಡಿನಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟಿ ಬೆಳೆಸಿದ ಹಿರಿಯ ಧುರೀಣರೂ ಆಗಿದ್ದ ಕಾ। ಎಂ. ಆರ್. ವೆಂಕಟರಾಮನ್ ಅವರ ನಿಧನಕ್ಕೆ ಹಾಗೂ ಇತರ ಅಗಲಿದ ಕಾರ್ಮಿಕ ಧುರೀಣರಿಗೆ ಅತೀವ ಸಂತಾಪವನ್ನು ವ್ಯಕ್ತಪಡಿಸಲಾಯಿತು.

ಬೆಲೆಯೇರಿಕೆಯನ್ನು ವಿರೋಧಿಸಿ ಜೀವನಾವಶ್ಯಕ ವಸ್ತುಗಳ ವಿತರಣಾ ವ್ಯವಸ್ಥೆಯನ್ನು ಸರಿಪಡಿಸಲು ಒತ್ತಾಯಿಸುವ, ರಾಜಸ್ಥಾನದಲ್ಲಿರುವ "ಕೋಟಾ" ನಗರದ ಜೆ. ಕೆ. ಸಿಂತೆಟೆಕ್ಸ್ ಕಾರ್ಮಿಕರ ಹೋರಾಟಕ್ಕೆ ಸೌಹಾರ್ದ ಬೆಂಬಲ ವ್ಯಕ್ತಪಡಿಸುವ ಹಾಗೂ ಮೇ ದಿನದಂದು ಸಂಬಳ ಸಹಿತ ರಜೆ ಘೋಷಿಸುವ ತಿದ್ದುಪಡಿಯನ್ನು ತರಬೇಕೆಂದು ಸರಕಾರವನ್ನು ಒತ್ತಾಯಿಸಲು ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಕಾ। ಸಿ. ನಾರಾಯಣರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಂಘಟನೆಯನ್ನು ಬಲಪಡಿಸಲು ಎಲ್ಲರೂ ಶ್ರಮಿಸಬೇಕೆಂದು ವಿನಂತಿ ಮಾಡಿಕೊಂಡು ಇತ್ತೀಚೆಗೆ ಬೀಡಿ ಕಾರ್ಮಿಕರು ನಡೆಸಿದ ಧೀರ ಹೋರಾಟದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಸಂಘದ ಅಧ್ಯಕ್ಷರಾದ ಕಾ। ಅಬ್ರಹಾಂ ಕರ್ಕಡರು ಸಂಘಟನೆಯನ್ನು ವಿವರಿಸುವ ಬಗ್ಗೆ ಹೇಳಿ, ಸಂಘಟನೆಯ ಪ್ರಜ್ಞೆಯೊಂದಿಗೆ ರಾಜಕೀಯ ಪ್ರಜ್ಞೆಯನ್ನು ಬೆಳೆಸಲು ಮುಂದಾಗಬೇಕೆಂದು ತಿಳಿಸಿದರು.

ಅನಂತರ 40 ಸದಸ್ಯರು ಇರುವ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಲಾಯಿತು. ಸಂಘದ ಪದಾಧಿಕಾರಿಗಳಾಗಿ 7 ಮಂದಿಯನ್ನು ಆಯ್ಕೆ ಮಾಡಲಾಯಿತು. ಸಂಘದ ಅಧ್ಯಕ್ಷರಾಗಿ ಕಾ। ಅಬ್ರಹಾಂ ಕರ್ಕಡರವರನ್ನು ಹಾಗೂ ಉಪಾಧ್ಯಕ್ಷರುಗಳಾಗಿ ಕಾ। ಕೆ. ಶಂಕರ್ ಮತ್ತು ಕಾ। ಟಿ. ಗುಲಾಬಿಯವರನ್ನು ಆಯ್ಕೆಮಾಡಲಾಯಿತು. ಕಾ। ವಿ. ಮಹಾಬಲರವರನ್ನು ಕಾರ್ಯದರ್ಶಿಯಾಗಿಯೂ ಹಾಗೂ ಟಿ. ನರಸಿಂಹ ಮತ್ತು ವಿ. ಗೌರಿ ಇವರನ್ನು ಜತೆ ಕಾರ್ಯದರ್ಶಿಗಳಾಗಿ ಆರಿಸಲಾಯಿತು. ಕಾ। ಸಿ. ನಾರಾಯಣನವರನ್ನು ಕೋಶಾಧಿಕಾರಿಯಾಗಿ ಆಯ್ಕೆ ಮಾಡಲಾಯಿತು.

ಕೊನೆಯಲ್ಲಿ ವಿ. ಮಹಾಬಲರವರು ಅಭಿನಂದನೆಯನ್ನು ಸಲ್ಲಿಸಿದರು.

ನೆರೆ ಹಾವಳಿ ಪರಿಹಾರ

(ಒಂದನೇ ಪುಟದಿಂದ)

ಮಾಡಿದೆ. ಬಂಡವಾಳಶಾಹಿ ವ್ಯವಸ್ಥೆಯ ಫಲವನ್ನುಣ್ಣುತ್ತಿದ್ದೇವೆ.

ಸಮತಾವಾದಿ ದೇಶಗಳಾದ ರಷ್ಯಾ-ಚೀನಾ ದೇಶಗಳು ಈಗಾಗಲೇ ನೆರೆ ಹಾವಳಿಯ ಸಮಸ್ಯೆ ಪರಿಹಾರಗಳನ್ನು ಕೈಗೊಂಡಿರುವುದನ್ನು ನಮ್ಮನ್ನು ಆಳುವವರು ಅಭ್ಯಾಸ ಮಾಡುವ ಪ್ರಯತ್ನದಲ್ಲಿಲ್ಲ. ಪ್ರತಿ ವರ್ಷ ನದಿಗಳಲ್ಲಿ ತುಂಬಿಕೊಂಡು ಅದರ ಆಳ ಕಡಿಮೆ ಮಾಡುತ್ತಿರುವ ಮಣ್ಣನ್ನು ತೆಗೆಯುವುದು, ನದಿಗಳ ಪ್ರವಾಹ ದಿಸೆಯನ್ನೇ ಬದಲಿಸುವುದು, ಜನರು ನದಿ ದಂಡೆಗಳಿಂದ ದೂರ ವಾಸಿಸುವಂತೆ ಮಾಡುವುದು, ನೆರೆಯಾಗಬಹುದಾದ ಸಂಗತಿಯನ್ನು ಮುಂಚಿತವಾಗಿಯೇ ತಿಳಿಸಿ, ಆಕಸ್ಮಾತ್ ಅಪಾಯ ಉಂಟಾಗುವ ಸಂದರ್ಭದಲ್ಲಿ ಅದನ್ನು ತಡೆಯಲು ಬೇಕಾದ ತಯಾರಿಯ ಸಿದ್ಧತೆ ಮಾಡುವುದು ಮುಂತಾದ ಹಲವಾರು ಕ್ರಮಗಳನ್ನು ಕೈಗೊಂಡಿದ್ದಾರೆಂಬ ಸಂಗತಿ ಆಳುವ ಪಕ್ಷಕ್ಕೆ ತಿಳಿದಿರಬೇಕು. ಆದರೆ ಅಂಥ ಪ್ರದೇಶಗಳನ್ನು ನಮ್ಮ ದೇಶದಲ್ಲಿ ಅಳವಡಿಸಿಕೊಳ್ಳುವ ಯಾವ ಪ್ರಯತ್ನವೂ ನಡೆಯದಿರುವುದನ್ನು ನೋಡುವಾಗ ಸರಕಾರ ಇಂಥ ಗಂಭೀರ ಸಮಸ್ಯೆಗಳ ಕುರಿತು ಎಷ್ಟು ಮುತುವರ್ಜಿಯಿಂದ ವರ್ತಿಸುತ್ತಿದೆಂದು ಕಂಡು ಬರುತ್ತದೆ.

ಈ ವರ್ಷ ಅತೀ ಮಳೆಯಿಂದಾಗಿ ಬೆಳಗಾವಿ, ಬಿಜಾಪುರ ಜಿಲ್ಲೆಗಳಲ್ಲಿ ಹಲವಾರು ಜನ, ಸಾವಿರಾರು ಪ್ರಾಣಿಗಳು ಸತ್ತಿದ್ದು, ಆಸ್ತಿ, ಬೆಳೆಗಳಿಗೆ ಅಪಾರ ಹಾನಿಯಾಗಿದೆ. ಇದಕ್ಕಾಗಿ ಐಕ್ಯರಂಗ ತನ್ನ ಸಂತಾಪವನ್ನು ವ್ಯಕ್ತ ಮಾಡುತ್ತದೆ. ಸಾಮೂಹಿಕ ಸಂಘಟನೆಗಳೂ, ಜನತೆಯೂ ಸಂತ್ರಸ್ತರಿಗೆ ಸರ್ವ ರೀತಿಯ ಸಹಾಯ ಒದಗಿಸಬೇಕೆಂದು ಕೇಳಿಕೊಳ್ಳುತ್ತೇವೆ. ಜನತಾ ಸರ್ಕಾರವೂ ಸಂಕಷ್ಟಕ್ಕೊಳಗಾಗಿರುವವರಿಗೆಲ್ಲ ತುರ್ತಿನ ಹಾಗೆಯೇ ಯೋಗ್ಯ ಪರಿಹಾರ ಒದಗಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಸುಳ್ಳಿಗೆ ಮತ್ತೊಂದು ಹೆಸರು ಸುಂದತ್ತಾ ಆಡಳಿತ ವರ್ಗ

ಹುಬ್ಬಳ್ಳಿಯ ಸುಂದತ್ತಾ ಫುಡ್ಸ ಅಂಡ್ ಫೈಬರ್ಸ ಫ್ಯಾಕ್ಟರಿಯಲ್ಲಿ ಆಡಳಿತ ವರ್ಗವು ದಿ. 4-6-83ರಿಂದ ಹೊರಗೀಲಿ (ಲಾಕೌಟ್) ಘೋಷಿಸಿದ್ದರಿಂದ ಸುಮಾರು 1000 ಕಾರ್ಮಿಕರ ಉದರ ನಿರ್ವಹಣೆಯ ಪ್ರಶ್ನೆ ತಲೆದೋರಿದ್ದಲ್ಲದೇ ಅವರ ಎರಡು ತಿಂಗಳಿನಿಂದ ಸಾಗಿರುವ ಹೋರಾಟವು ಹೊಸ ಹಂತ ಸೇರಿದೆ. ಸಮರಶೀಲ ಸಿ.ಐ.ಟಿ.ಯು ಸಂಘಟನೆಯನ್ನು ಒಡೆಯುವುದಕ್ಕಾಗಿ ಕೆಲವೇ ಜನರಿಗೆ ವೇತನ ಹೆಚ್ಚಳವನ್ನು ಘೋಷಿಸಿದಾಗ ಅದನ್ನು ಎಲ್ಲ ಕಾರ್ಮಿಕರೂ ಒಟ್ಟಾಗಿಯೇ ವಿರೋಧಿಸಿದರು. ಇದಕ್ಕೆ ಉತ್ತರವಾಗಿ ಆಡಳಿತವರ್ಗವು ಹೆಚ್ಚಾಗಿ ಯೂನಿಯನ್ನಿನ ಕಾರ್ಯಕರ್ತರನ್ನೇ ಒಳಗೊಂಡ 21 ಕಾರ್ಮಿಕರನ್ನು ಸಸ್ಪೆಂಡ್‌ಗೊಳಿಸಿತು. ಈ ಸಸ್ಪೆನ್ಶನ್ ಆಜ್ಞೆಗಳನ್ನು ರದ್ದುಗೊಳಿಸಬೇಕೆಂದು ಕೇಳಿ ಕಾರ್ಮಿಕರು ಹೋರಾಟ ಮುಂದುವರೆಸಿದರು. ತಾನೇ ಸೃಷ್ಟಿಸಿದ ಸಮಸ್ಯೆಯನ್ನು ಆಡಳಿತ ವರ್ಗ ಮನಸ್ಸು ಮಾಡಿದ್ದರೆ ಬಗೆಹರಿಸಬಹುದಾಗಿತ್ತು. ಫ್ಯಾಕ್ಟರಿಯಲ್ಲಿ ಸಾಮಾನ್ಯ ಸ್ಥಿತಿಯನ್ನು ಪುನರ್ ಸ್ಥಾಪಿಸಲು ಯುನಿಯನ್ ಹಲವು ಸಂಧಾನಕಾರಿ ಸೂಚನೆಗಳನ್ನಿಟ್ಟರೂ ಕೂಡ ಅವೆಲ್ಲವುಗಳನ್ನು ತಿರಸ್ಕರಿಸಿ ಆಡಳಿತ ವರ್ಗವು ಯಾವ ಮುನ್ಸೂಚನೆಯೂ ಇಲ್ಲದೇ ದಿ. 4-6-83ರಂದು ಹೊರಗೀಲಿ ಘೋಷಿಸಿತು. ದಿ. 7ಜೂನ್‌ರಂದು ಸಮಸ್ಯೆಯ ಇತ್ಯರ್ಥಕ್ಕಾಗಿ ಕಾರ್ಮಿಕ ಮಂತ್ರಿ ಅಜೀಜ್ ಸೇಠ್ ಹಾಗೂ ಲೇಬರ್ ಕಮೀಶನರ್ ಅವರ ಸಮ್ಮುಖದಲ್ಲಿಯೇ ಹುಬ್ಬಳ್ಳಿಯಲ್ಲಿ ಮಾತುಕತೆಗಳು ನಡೆದವು. ಆಗ ಸಂಘದ ನೇತೃತ್ವದ ಮೇಲೆ ಹುರುಳಿಲ್ಲದ ಆರೋಪಗಳನ್ನೆಲ್ಲ ಆಡಳಿತ ವರ್ಗ ಮಾಡಿತು. ಹೋದ ವರ್ಷ 1.58 ಕೋಟಿ ರೂ. ಲಾಭ ಗಳಿಸಿದ್ದರೂ ಕೂಡ ಕಂಪನಿ ವಿಪರೀತ ಹಾನಿಯಲ್ಲಿದೆ. ಎಂಬ ಸುಳ್ಳನ್ನು ಆಡಳಿತ ವರ್ಗ ಪ್ರತಿಪಾದಿಸಿತು. ತನಗೆ ಮೇಲಿಂದ ಮೇಲೆ ಕಾರ್ಮಿಕ ಅಶಾಂತಿ ಬೇಕಿಲ್ಲವೆಂದೂ, ಈ ಹಿಂದಿನ ನಾಲ್ಕು ವರ್ಷಗಳ ಒಪ್ಪಂದವು ಡಿಸೆಂಬರನಲ್ಲಿ ಮುಕ್ತಾಯಗೊಳ್ಳುವುದಿದ್ದರೂ ಕೂಡ ಈಗಲೇ ಅದನ್ನು ಅಂತ್ಯಗೊಳಿಸೋಣ, ಸಂಘವು ಹೊಸ ಬೇಡಿಕೆಪತ್ರ ಒಪ್ಪಿಸಲಿ ಹೊಸ ಒಪ್ಪಂದವಾದ ಬಳಿಕವೇ ತಾನು ಫ್ಯಾಕ್ಟರಿ ತೆಗೆಯುವುದಾಗಿ ಕಂಪನಿಯ ಮಾಲಿಕರು ತಿಳಿಸಿದರು ಆಗ ಅಜೀಜ್ ಸೇಠರು ಸಂಘವು ಒಂದು ವಾರದೊಳಗಾಗಿ ಹೊಸ ಬೇಡಿಕೆ ಪತ್ರಸಲ್ಲಿಸಬೇಕೆಂದು ಕೇಳಿದ್ದಲ್ಲದೇ, ಆಡಳಿತವರ್ಗವು ಒಂದು ವಾರದ ನಂತರ ಹೊರಗೀಲಿ ತೆಗೆಯದಿದ್ದರೆ ತಾನು ಸ್ವತಃ ಮಧ್ಯ ಪ್ರವೇಶಮಾಡಿ ಹೊರಗೀಲಿ ಎತ್ತಿಸುವುದಾಗಿ ಭರವಸೆಕೊಟ್ಟರು. ಆ ಪ್ರಕಾರ ಕಾರ್ಮಿಕ ಸಂಘವು ದಿ. 14-6-83 ರಂದು ಹೊಸ ಬೇಡಿಕೆ ಪತ್ರ ಸಲ್ಲಿಸಿತು. ನಂತರ ಒಂದು ವಾರದ ವರೆಗೆ ದಾರಿ ಕಾದರೂ ಹೊರಗೀಲಿಯನ್ನು ತೆರೆಯದಿದ್ದಾಗ ದಿ. 21-6-83 ರಂದು ಸಂಘದ ಅಧ್ಯಕ್ಷ ಕಾ॥ ವಿ. ಜೆ. ಕೆ. ನಾಯರ್, ಸಂಘಟನಾ ಕಾರ್ಯದರ್ಶಿ ಕಾ। ಸುಧೀಂದ್ರ ಹಾಗೂ ಇತರರು ಎಕ್ಸಿಕ್ಯೂಟಿವ್ ಪ್ರೆಸಿಡೆಂಟ್ ಅಡೋಕಿಯನನ್ನು ಭೆಟ್ಟಿಯಾದಾಗ ಅವನು ಹೇಳಿದ್ದೇನೆಂದರೆ, "ನಾನು ಹೊಸ ಬೇಡಿಕೆ ಪತ್ರ ಸಲ್ಲಿಸಲು ನಿಮಗೆ ಎಂದೂ ಕೇಳಿಕೊಂಡದ್ದೇ ಇಲ್ಲ. ಹಳೆಯ ಒಪ್ಪಂದವನ್ನೇ ಡಿಸೆಂಬರಿನ ನಂತರವೂ ಮುಂದುವರೆಸೋಣ ಏಕೆಂದರೆ ಕಂಪನಿ ಹಾನಿಯಲ್ಲಿದೆ, ಎಂದು ಮಾತ್ರ ನಾನು ಹೇಳಿದ್ದು." ಎಂದು ಸುಳ್ಳು ಹೇಳಿ ಜಾರಿಕೊಂಡರು. ಇದರಿಂದ ಸರಕಾರ ಮತ್ತು ಮಾಲಿಕ ವರ್ಗ ಸೇರಿ ಕೆಲಸಗಾರರಿಗೆ ಯಾವ ರೀತಿ ಮೋಸಮಾಡುತ್ತಿದ್ದಾರೆಂದು ಕಂಡುಬರುತ್ತದೆ. ಇಂಥ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಹೋರಾಟ ಮುನ್ನಡೆಯಲಿ.

ಬೆಂಗಳೂರು :

೯-೭-೮೩ರಿಂದ ಎಲೆಕ್ಟ್ರೋಮ್ಸ್ ಮಹಿಳಾ ಕಾರ್ಮಿಕರ ಧರಣಿ

"ಎಲೆಕ್ಟ್ರೋಮ್ಸ್ ಪ್ರೈವೇಟ್ ಲಿ." ಎಂಬ ಒಂದೇ ಹೆಸರಿನ ಎರಡು ಕಾರ್ಖಾನೆಗಳ ಮಾಲೀಕರು ಶ್ರೀಮತಿ ಪ್ರೇಮಾ ಕೃಷ್ಣನ್ ಮತ್ತು ಕೃಷ್ಣನ್ ಎಂಬ ಸತಿ-ಪತಿಯರು ಈ ಎರಡು ಕಾರ್ಖಾನೆಗಳಲ್ಲೂ ಅಂಚೆ ಮತ್ತು ತಂತಿ ಇಲಾಖೆಗೆ ಸಂಬಂಧಪಟ್ಟ ಲೋಡಿಂಗ್ ಕಾಯಿಲ್ಸ್‌ಗಳು ತಯಾರಾಗುತ್ತವೆ. ಒಂದು ಕಾರ್ಖಾನೆ ಕೆಂಗೇರಿಯಲ್ಲೂ ಮತ್ತೊಂದು ಶೇಷಾದ್ರಿಪುರಂನಲ್ಲೂ ಇದೆ. ಈ ಎರಡೂ ಕಾರ್ಖಾನೆಗಳಲ್ಲೂ ಒಂದೇ ವಿಧವಾದ ಕೆಲಸ ನಡೆದರೂ ಅನೇಕ ಸವಲತ್ತುಗಳನ್ನು ಕಾರ್ಮಿಕರಿಗೆ ಕಾನೂನು ರೀತಿ ನೀಡುವುದನ್ನು ತಪ್ಪಿಸಿಕೊಳ್ಳಲು ಎರಡು ಪ್ರದೇಶಗಳಲ್ಲಿ ಪ್ರತ್ಯೇಕವಾಗಿ ವಿಭಾಗ ಮಾಡಿ ತಲಾ ಕಾರ್ಖಾನೆಯಲ್ಲಿ 60 ಮಹಿಳಾ ಕಾರ್ಮಿಕರಂತೆ ಒಟ್ಟು 120 ಮಹಿಳಾ ಕಾರ್ಮಿಕರನ್ನು ಮಾಲೀಕರು ನೇಮಿಸಿಕೊಂಡಿರುತ್ತಾರೆ. ಈ ಮಹಿಳಾ ಕಾರ್ಮಿಕರು ಅನೇಕ ವರ್ಷಗಳಿಂದ ದುಡಿದಿದ್ದರೂ ಮಹಿಳಾ ಮಾಲೀಕಳಾದ ಶ್ರೀಮತಿ ಪ್ರೇಮಾಕೃಷ್ಣನ್ (ಮ್ಯಾನೇಜಿಂಗ್ ಡೈರೆಕ್ಟರ್) ನೀಡುತ್ತಿರುವ ಸಂಬಳ ದಿನಕ್ಕೆ ಒಬ್ಬರಿಗೆ 5ರಿಂದ 6 ರೂ. ಎಂದರೆ ಅದೂ ಹೆಚ್ಚು. ಈ ಎರಡು ಪ್ರದೇಶಗಳಲ್ಲಿ ಕಾರ್ಖಾನೆಗಳನ್ನು ವಿಭಾಗ ಮಾಡಿರುವುದು ಏತಕ್ಕೆಂದರೆ ಒಂದು ಕಾರ್ಖಾನೆಯಲ್ಲಿ ಕಾರ್ಮಿಕ ಸಂಘ ರಚಿಸಿ ಮಾಲೀಕರಿಗೆ ತೊಂದರೆ ಆದರೆ ಮತ್ತೊಂದು ಕಾರ್ಖಾನೆಯಲ್ಲಿ ಅದೇ ಕೆಲಸವನ್ನು ಮಾಡಿಸಿ ಕಾರ್ಮಿಕರನ್ನು ಬೀದಿ ಪಾಲು ಮಾಡಿ ಮಾಲೀಕರ ಹೆಚ್ಚಿನ ಲಾಭಕ್ಕೆ ಯಾವಾಗಲೂ ಅಪಾಯ ಬಾರದಂತಿರಲು ನೋಡಿಕೊಳ್ಳುವ ಸ್ವಾರ್ಥ ದೃಷ್ಟಿಯಿಂದ ಮಾತ್ರ.

ಸುಮಾರು 60 ಮಹಿಳಾ ಕಾರ್ಮಿಕರಿರುವ ಕೆಂಗೇರಿ ಶಾಖೆಯಲ್ಲಿ ದಿನಾಂಕ 17-10-1982ರಂದು ಒಂದು ಕಾರ್ಮಿಕರ ಸಂಘವನ್ನು ರಚಿಸಿಕೊಂಡರು. ಯಾವುದೇ ಬೇಡಿಕೆಯನ್ನು ಕೂಡ ಮಾಲೀಕಳಾದ ಶ್ರೀಮತಿ ಪ್ರೇಮಾಕೃಷ್ಣನ್ ಬಳಿ ಇಟ್ಟಿರಲಿಲ್ಲ. ಸಂಘವನ್ನು ರಚಿಸಿಕೊಂಡದ್ದೇ ತಡ, ಪ್ರಾರಂಭವಾಯ್ತು ಮಾಲೀಕರ ಕಾರ್ಮಿಕ ವಿರೋಧಿ ಚಟುವಟಿಕೆ. ಸಂಘವನ್ನು ಮುರಿಯಲು ನಾನಾ ರೀತಿ ಪ್ರಯತ್ನ ಮಾಡಲಾಯಿತು. ಸಾಧ್ಯವಾಗಲಿಲ್ಲ. ಕೊನೆಗೆ ಬೇಸತ್ತು ದಿನಾಂಕ 4-2-83 ರಿಂದ ಅಕ್ರಮ ಲೇ ಆಫ್ ಘೋಷಿಸಿದಳು. ಆದರೆ ಕೆಂಗೇರಿಯಲ್ಲಿ ಮಾಡುತ್ತಿದ್ದ ಎಲ್ಲಾ ಕೆಲಸವನ್ನು ಶೇಷಾದ್ರಿಪುರಂನಲ್ಲಿರುವ ಇನ್ನೊಂದು ಕಾರ್ಖಾನೆಯಲ್ಲಿ ಬೇರೆ ಕೆಲಸಗಾರರನ್ನು ಇಟ್ಟು ಕೆಲಸ ಮಾಡಿಸಿದಳು. ತನ್ನ ಲಾಭಕ್ಕೆ ಮಾತ್ರ ಎಳ್ಳಷ್ಟು ಕೊರತೆ ಇಲ್ಲ. ಶೇಷಾದ್ರಿಪುರಂ ವಿಭಾಗದಲ್ಲಿದ್ದ ಉಳಿದ 60 ಮಹಿಳಾ ಕಾರ್ಮಿಕರನ್ನು ಸೇರಿಸಿ ತಾನೇ ಅಧ್ಯಕ್ಷಳಾಗಿ ಇನ್ನೊಂದು ಸಂಘವನ್ನು ಸ್ಥಾಪಿಸಿದಳು. ಬೇರೆ ಕಾರ್ಮಿಕ ಸಂಘಕ್ಕೆ ಸದಸ್ಯರಾದರೆ ನಿಮಗೂ ಲೇ ಆಫ್ ಕೊಡುವುದಾಗಿ ಬೆದರಿಸಿ ಆ ಕಾರ್ಮಿಕ ಸಂಘಕ್ಕೆ ಸದಸ್ಯರಾಗದಂತೆ ಜಾಗ್ರತೆ ವಹಿಸಿದಳು. ಗೂಂಡಾಗಳ ಮತ್ತು ಪೋಲೀಸರಿಗೆ ಲಂಚ ನೀಡಿ ಶೇಷಾದ್ರಿಪುರಂನಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರನ್ನು ತನ್ನ ಹತೋಟಿಯಲ್ಲಿಟ್ಟು ಕೊಳ್ಳುವುದರಲ್ಲಿ ಜಯಶೀಲಳಾದಳು. ಈ ಮಹಿಳಾ ಕಾರ್ಮಿಕರು ಹೋರಾಟ ನಡೆಸಿದ್ದಾರೆ. ಕಾರ್ಮಿಕ ಮಂತ್ರಿಯವರಿಗೂ, ಮುಖ್ಯ ಮಂತ್ರಿಯವರಿಗೂ ಹಲವಾರು ಮನವಿಗಳನ್ನು ಸಲ್ಲಿಸಿದರೂ ಏನೂ ಪ್ರಯೋಜನವಾಗಿಲ್ಲ. ಆದ ಕಾರಣ 9-7-83 ರಿಂದ ಮುಖ್ಯ ಮಂತ್ರಿಯವರ ಮನೆ ಮುಂದೆ ನಿರಶನ ಹೂಡಲು ನಿರ್ಧರಿಸಿದ್ದಾರೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee. L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154
Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRA RAO